



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسۡمِ اللّٰهِ الرَّحۡمٰنِ الرَّحِيۡمِ ○

1. ಇದೊಂದು ಅಧ್ಯಾಯ, ಇದನ್ನು ನಾವು ಅವತೀರ್ಣಗೊಳಿಸಿದ್ದೇವೆ, ಇದನ್ನು ನಾವು ಕಡ್ಡಾಯ ಗೊಳಿಸಿರುತ್ತೇವೆ ಮತ್ತು ನೀವು ಪಾಠ ಕಲಿಯುವಂತಾಗಲು, ಇದರಲ್ಲಿ ನಾವು ಸುಸ್ಪಷ್ಟ ಆದೇಶಗಳನ್ನು ಅವತೀರ್ಣಗೊಳಿಸಿರುತ್ತೇವೆ.[1]

سُوۡرَةٌ اَنۡزَلۡنٰهَا وَفَرَضۡنٰهَا وَاَنۡزَلۡنَا
فِيۡهَاۤ اٰيٰتٍۢ بَيِّنٰتٍ لَّعَلَّكُمۡ تَذَكَّرُوۡنَ ①

2. ವ್ಯಭಿಚಾರಿ ಮತ್ತು ವ್ಯಭಿಚಾರಿಣಿ ಇವರಿಬ್ಬರಲ್ಲಿ ಪ್ರತಿಯೊಬ್ಬರಿಗೂ ನೂರು ಛಡಿಯೇಟು ಕೊಡಿರಿ[2] ನೀವು ಅಲ್ಲಾಹನ ಹಾಗೂ ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಅಲ್ಲಾಹನ ಧರ್ಮದ ವಿಷಯದಲ್ಲಿ ಅವರ ಮೇಲಿನ ಕನಿಕರವು ನಿಮ್ಮನ್ನು ತಡೆಯದಿರಲಿ. ಅವರಿಗೆ ಶಿಕ್ಷೆ ಕೊಡುವಾಗ ಸತ್ಯವಿಶ್ವಾಸಿಗಳ ಒಂದು ಸಮೂಹ ಅಲ್ಲಿ ಉಪಸ್ಥಿತವಿರಲಿ.[3]

اَلزَّانِيَةُ وَالزَّانِىۡ فَاجۡلِدُوۡا كُلَّ
وَاحِدٍ مِّنۡهُمَا مِائَةَ جَلۡدَةٍ ۖ وَّلَا
تَاۡخُذۡكُمۡ بِهِمَا رَاۡفَةٌ فِىۡ دِيۡنِ اللّٰهِ
اِنۡ كُنۡتُمۡ تُؤۡمِنُوۡنَ بِاللّٰهِ وَالۡيَوۡمِ
الۡاٰخِرِ ۚ وَلۡيَشۡهَدۡ عَذَابَهُمَا طَآئِفَةٌ
مِّنَ الۡمُؤۡمِنِيۡنَ ②

3. ವ್ಯಭಿಚಾರಿಯು ವ್ಯಭಿಚಾರಿಣಿಯೊಂದಿಗೆ ಅಥವಾ ಬಹುದೇವ ವಿಶ್ವಾಸಿನಿಯೊಂದಿಗೆ ಹೊರತು ವಿವಾಹವಾಗದಿರಲಿ ಮತ್ತು

اَلزَّانِىۡ لَا يَنۡكِحُ اِلَّا زَانِيَةً اَوۡ مُشۡرِكَةً

1. ಅರ್ಥಾತ್- ಈ ಸೂಕ್ತದಲ್ಲಿರುವ ವಿಷಯಗಳು ಮನಸ್ಸಿಗೆ ತೋಚಿದರೆ ಒಪ್ಪಿಕೊಂಡು, ಇಲ್ಲದಿದ್ದರೆ ಮನಬಂದಂತೆ ವರ್ತಿಸುತ್ತಿರಲು ಇರುವ ಶಿಫಾರಸ್ಸುಗಳಲ್ಲ. ಇದು ಕಟ್ಟುನಿಟ್ಟಿನ ಆಜ್ಞೆಗಳಾಗಿವೆ. ಇದರ ಅನುಸರಣೆ ಮಾಡಲೇಬೇಕಾಗಿದೆ. ನೀವು ಸತ್ಯವಿಶ್ವಾಸಿಗಳಾಗಿದ್ದರೆ ಇದರ ಪಾಲನೆ ನಿಮ್ಮ ಪಾಲಿಗೆ ಕಡ್ಡಾಯ.
2. ವ್ಯಭಿಚಾರದ ಕುರಿತು ಮೊದಲ ಆಜ್ಞೆ ಅನ್ನಿಸಾ ಅಧ್ಯಾಯದ 15ನೆಯ ಸೂಕ್ತದಲ್ಲಿ ಬಂದಿದೆ. ಈಗ ಅದರ ನಿರ್ಣಾಯಕ ಶಿಕ್ಷೆಯನ್ನು ಗೊತ್ತುಪಡಿಸಲಾಗುತ್ತಿದೆ. ಇದು ವ್ಯಭಿಚಾರಿ ಮತ್ತು ವ್ಯಭಿಚಾರಿಣಿಗಳಿಬ್ಬರೂ ಅವಿವಾಹಿತರಾಗಿದ್ದರೆ ಇರುವ ಆಜ್ಞೆ. ಪವಿತ್ರ ಕುರ್‌ಆನಿನಲ್ಲೂ, ಅನ್ನಿಸಾ ಅಧ್ಯಾಯದ 25ನೆಯ ಸೂಕ್ತದಿಂದ ವ್ಯಕ್ತವಾಗುವಂತೆ ಮತ್ತು ಅನೇಕ ಪ್ರವಾದಿವಚನಗಳು, ಪ್ರವಾದಿವರ್ಯರು(ಸ) ಮತ್ತು ನಾಲ್ವರು ಖಲೀಫಾಗಳ ಚರ್ಯೆ ಹಾಗೂ ಬಹುತೇಕ ವಿದ್ವಾಂಸರ ಒಮ್ಮತಾಭಿಪ್ರಾಯದ ಪ್ರಕಾರವೂ ವಿವಾಹಿತರು ಎಸಗುವ ವ್ಯಭಿಚಾರದ ಶಿಕ್ಷೆ ಕಲ್ಲೆಸೆದು ಕೊಲ್ಲುವುದಾಗಿದೆ.
3. ಅರ್ಥಾತ್- ಶಿಕ್ಷೆಯನ್ನು ಸಾರ್ವಜನಿಕವಾಗಿ ನೀಡಬೇಕು. ಇದರಿಂದ ಅಪರಾಧಿಯಲ್ಲಿ ನಾಚಿಕೆಯುಂಟಾಗಬೇಕು ಮತ್ತು ಇತರರೂ ಅದರಿಂದ ಪಾಠ ಕಲಿಯಬೇಕು. ಈ ಅಪರಾಧ ಮುಸ್ಲಿಮ್ ಸಮಾಜದಲ್ಲಿ ಹರಡದಂತಾಗಬೇಕು.

وَّالزَّانِيَةُ لَا يَنْكِحُهَآ اِلَّا زَانٍ اَوْ مُشْرِكٌ ۚ وَحُرِّمَ ذٰلِكَ عَلَى الْمُؤْمِنِيْنَ ۝٣

ವ್ಯಭಿಚಾರಿಣಿಯೊಂದಿಗೆ ವ್ಯಭಿಚಾರಿ ಅಥವಾ ಬಹುದೇವ ವಿಶ್ವಾಸಿಯ ಹೊರತು ವಿವಾಹವಾಗದಿರಲಿ, ಇದನ್ನು ಸತ್ಯವಿಶ್ವಾಸಿಗಳ ಮೇಲೆ ನಿಷಿದ್ಧಗೊಳಿಸಲಾಗಿದೆ.[4]

وَالَّذِيْنَ يَرْمُوْنَ الْمُحْصَنٰتِ ثُمَّ لَمْ يَاْتُوْا بِاَرْبَعَةِ شُهَدَآءَ فَاجْلِدُوْهُمْ ثَمٰنِيْنَ جَلْدَةً وَّلَا تَقْبَلُوْا لَهُمْ شَهَادَةً اَبَدًا ۚ وَاُولٰٓئِكَ هُمُ الْفٰسِقُوْنَ ۝٤

4. ಯಾರು ಸುಶೀಲೆಯರ ಮೇಲೆ ಆರೋಪ ಹೊರಿಸುತ್ತಾರೋ,[5] ಆ ಬಳಿಕ ನಾಲ್ವರು ಸಾಕ್ಷಿದಾರರನ್ನು ತರುವುದಿಲ್ಲವೋ ಅವರಿಗೆ ಎಂಭತ್ತು ಛಡಿಯೇಟು ಕೊಡಿರಿ ಮತ್ತು ಅವರ ಸಾಕ್ಷ್ಯವನ್ನು ಎಂದಿಗೂ ಸ್ವೀಕರಿಸಬೇಡಿರಿ. ಅವರು ಸ್ವಯಂ ಕರ್ಮಭ್ರಷ್ಟರು.

اِلَّا الَّذِيْنَ تَابُوْا مِنْۢ بَعْدِ ذٰلِكَ وَاَصْلَحُوْا ۚ فَاِنَّ اللّٰهَ غَفُوْرٌ رَّحِيْمٌ ۝٥

5. ಈ ಕೃತ್ಯದ ಬಳಿಕ ಪಶ್ಚಾತ್ತಾಪ ಪಟ್ಟು ತಮ್ಮನ್ನು ತಾವೇ ಸುಧಾರಿಸಿಕೊಂಡವರ ಹೊರತು. ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[6]

وَالَّذِيْنَ يَرْمُوْنَ اَزْوَاجَهُمْ وَلَمْ يَكُنْ لَّهُمْ شُهَدَآءُ اِلَّآ اَنْفُسُهُمْ فَشَهَادَةُ اَحَدِهِمْ اَرْبَعُ شَهٰدٰتٍۢ بِاللّٰهِ ۙ اِنَّهٗ لَمِنَ الصّٰدِقِيْنَ ۝٦

6. ತಮ್ಮ ಪತ್ನಿಯರ ಮೇಲೆ ಆರೋಪ ಹೊರಿಸುವವರ[7] ಬಳಿ ಸ್ವಯಂ ಅವರ ಹೊರತು ಬೇರೆ ಯಾರೂ ಸಾಕ್ಷಿದಾರರಿಲ್ಲದಿದ್ದರೆ ಅವರಲ್ಲಿ ಒಬ್ಬನ ಸಾಕ್ಷ್ಯವು (ಹೇಗಿರಬೇಕೆಂದರೆ) ಅವನು ನಾಲ್ಕು ಬಾರಿ ಅಲ್ಲಾಹನ ಆಣೆ ಹಾಕಿ ತಾನು (ಹೊರಿಸಿದ ಆರೋಪದ ವಿಷಯದಲ್ಲಿ) ಸತ್ಯವಂತನೆಂದು ಸಾಕ್ಷ್ಯ ಹೇಳಲಿ.

وَالْخَامِسَةُ اَنَّ لَعْنَتَ اللّٰهِ عَلَيْهِ اِنْ كَانَ مِنَ الْكٰذِبِيْنَ ۝٧

7. ಮತ್ತು ಐದನೇ ಬಾರಿ, ತಾನು (ಈ ಆರೋಪದಲ್ಲಿ) ಸುಳ್ಳನಾಗಿದ್ದರೆ ತನ್ನ ಮೇಲೆ ಅಲ್ಲಾಹನ ಶಾಪವಿರಲೆಂದು ಹೇಳಲಿ.

---

4. ಅರ್ಥಾತ್- ಪಶ್ಚಾತ್ತಾಪ ಪಟ್ಟು ಮರಳದ ವ್ಯಭಿಚಾರಿಗೆ, ವ್ಯಭಿಚಾರಿಣಿ ಅಥವಾ ಬಹುದೇವಾರಾಧಕಿ ಮಾತ್ರ ಸೂಕ್ತ ಸಂಗಾತಿಯಾಗಬಲ್ಲಳು. ಸತ್ಯವಿಶ್ವಾಸಿನಿಯಾದ ಸದಾಚಾರಿ ಮಹಿಳೆಗೆ ಅವನು ಸೂಕ್ತ ಸಂಗಾತಿಯಾಗಲಾರ. ಪ್ರಜ್ಞಾಪೂರ್ವಕವಾಗಿ ತಮ್ಮ ಪುತ್ರಿಯರನ್ನು ಧರ್ಮಭ್ರಷ್ಟರಿಗೆ ವಿವಾಹ ಮಾಡಿಕೊಡುವುದು ಸತ್ಯವಿಶ್ವಾಸಿಗಳ ಪಾಲಿಗೆ ನಿಷಿದ್ಧ. ಹಾಗೆಯೇ ಪಶ್ಚಾತ್ತಾಪಪಟ್ಟು ಮರಳದ ವ್ಯಭಿಚಾರಿಣಿಗೆ ಅವಳಂತಹ ವ್ಯಭಿಚಾರಿ ಅಥವಾ ಬಹುದೇವಾರಾಧಕ ಮಾತ್ರ ಸೂಕ್ತ ವಾಗಬಹುದು. ಸತ್ಯವಿಶ್ವಾಸಿಯಾದ ಸದಾಚಾರಿ ಪುರುಷನಿಗೆ ಆಕೆ ಸೂಕ್ತ ಸಂಗಾತಿ ಆಗಲಾರಳು. ಪ್ರಜ್ಞಾಪೂರ್ವಕವಾಗಿ ದುಶ್ಶೀಲೆಯಾದ ಸ್ತ್ರೀಯೊಂದಿಗೆ ವಿವಾಹವಾಗುವುದು ಸತ್ಯವಿಶ್ವಾಸಿಗಳಿಗೆ ನಿಷಿದ್ಧ. ತಮ್ಮ ಕೆಟ್ಟ ನಡವಳಿಕೆಯಲ್ಲಿ ನೆಲೆ ನಿಲ್ಲುವಂತಹ ಸ್ತ್ರೀ-ಪುರುಷರಿಗೆ ಮಾತ್ರ ಈ ಆದೇಶ ಅನ್ವಯವಾಗುತ್ತದೆ. ಪಶ್ಚಾತ್ತಾಪ ಪಟ್ಟು ತಮ್ಮನ್ನು ಸುಧಾರಿಸಿಕೊಳ್ಳುವವರಿಗೆ ಇದು ಅನ್ವಯವಾಗುವುದಿಲ್ಲ. ಏಕೆಂದರೆ ಪಶ್ಚಾತ್ತಾಪ ಪಟ್ಟನಂತರ 'ವ್ಯಭಿಚಾರಿ' ಎನ್ನುವ ವಿಶೇಷಣ ಅವರಿಗೆ ಅಂಟಿಕೊಂಡಿರುವುದಿಲ್ಲ.
5. ಅರ್ಥಾತ್- ವ್ಯಭಿಚಾರದ ಆರೋಪ. ಸುಶೀಲ ಪುರುಷರ ಮೇಲೆ ವ್ಯಭಿಚಾರದ ಆರೋಪ ಹೊರಿಸುವವರಿಗೂ ಇದೇ ಆದೇಶ ಅನ್ವಯವಾಗುತ್ತದೆ. ಶರೀಅತ್‌ನ ಪಾರಿಭಾಷಿಕದಲ್ಲಿ ಹೀಗೆ ಆರೋಪ ಹೊರಿಸುವುದಕ್ಕೆ 'ಕಝ್‌ಫ್' ಎಂದು ಹೆಸರು.
6. ತೌಬಾದಿಂದ 'ಕಝ್‌ಫ್'ನ ಶಿಕ್ಷೆ ರದ್ದಾಗುವುದಿಲ್ಲ ಎಂಬ ಬಗ್ಗೆ ಕರ್ಮಶಾಸ್ತ್ರಜ್ಞರಲ್ಲಿ ಒಮ್ಮತಾಭಿಪ್ರಾಯವಿದೆ. ತೌಬಾ ಮಾಡುವವನು ಧರ್ಮಭ್ರಷ್ಟನಾಗಿ ಉಳಿಯುವುದಿಲ್ಲ ಮತ್ತು ಅಲ್ಲಾಹನು ಅವನನ್ನು ಕ್ಷಮಿಸಿ ಬಿಡುತ್ತಾನೆ ಎಂಬ ಬಗ್ಗೆಯೂ ಒಮ್ಮತಾಭಿಪ್ರಾಯವಿದೆ. ಆದರೆ ತೌಬಾ ಮಾಡಿದ ನಂತರ ಅವನ ಸಾಕ್ಷ್ಯವನ್ನು ಸ್ವೀಕರಿಸಲಾಗುವುದೋ ಇಲ್ಲವೋ ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಅವರ ಸಾಕ್ಷ್ಯ ಸ್ವೀಕಾರಾರ್ಹವಲ್ಲವೆಂದು ಹನಫೀ ಕರ್ಮಶಾಸ್ತ್ರಜ್ಞರು ಅಭಿಪ್ರಾಯ ಪಟ್ಟರೆ, ಇಮಾಮ್ ಶಾಫಈ, ಇಮಾಮ್ ಮಾಲಿಕ್ ಮತ್ತು ಇಮಾಮ್ ಅಹ್ಮದ್ ಅವರ ಸಾಕ್ಷ್ಯವನ್ನು ಸ್ವೀಕಾರಾರ್ಹವೆಂದು ಭಾವಿಸುತ್ತಾರೆ.
7. ಅರ್ಥಾತ್ ವ್ಯಭಿಚಾರದ ಆರೋಪ ಹೊರಿಸುವುದು.

8. ಮತ್ತು ಆ ಸ್ತ್ರೀಯ ಮೇಲಿನಿಂದ ಶಿಕ್ಷೆಯನ್ನು ತಪ್ಪಿಸಲು ಇರುವ ಕ್ರಮವೇನೆಂದರೆ ಆಕೆ ನಾಲ್ಕು ಬಾರಿ ಅಲ್ಲಾಹನ ಆಣೆ ಹಾಕಿ ಈತನು (ತನ್ನ ಆರೋಪದಲ್ಲಿ) ಸುಳ್ಳನೆಂದು ಸಾಕ್ಷ್ಯ ಹೇಳಬೇಕು-

وَيَدْرَؤُا عَنْهَا الْعَذَابَ أَنْ تَشْهَدَ
أَرْبَعَ شَهَادَاتٍ بِاللَّهِ إِنَّهُ لَمِنَ الْكَاذِبِينَ ﴿٨﴾

9. ಮತ್ತು ಐದನೆಯ ಬಾರಿ, ಒಂದು ವೇಳೆ ಆತನು ಸತ್ಯವಂತನಾಗಿದ್ದರೆ ನನ್ನ ಮೇಲೆ ಅಲ್ಲಾಹನ ಕ್ರೋಧವೆರಗಲಿ ಎಂದು ಹೇಳಬೇಕು.[8]

وَالْخَامِسَةَ أَنَّ غَضَبَ اللَّهِ عَلَيْهَا إِنْ
كَانَ مِنَ الصَّادِقِينَ ﴿٩﴾

10. ನಿಮ್ಮ ಮೇಲೆ ಅಲ್ಲಾಹನ ಅನುಗ್ರಹವೂ ಅವನ ಕೃಪೆಯೂ ಇಲ್ಲದಿರುತ್ತಿದ್ದರೆ ಮತ್ತು ಅಲ್ಲಾಹ್ ಪಶ್ಚಾತ್ತಾಪ ಸ್ವೀಕರಿಸುವವನೂ ಯುಕ್ತಿಪೂರ್ಣನೂ ಆಗಿರದಿರುತ್ತಿದ್ದರೆ (ಪತ್ನಿಯರ ಮೇಲೆ ಆರೋಪ ಹೊರಿಸುವ ಪ್ರಕರಣವು ನಿಮ್ಮನ್ನು ದೊಡ್ಡ ಪೇಚಿನಲ್ಲಿ ಸಿಲುಕಿಸಿ ಬಿಡುತ್ತಿತ್ತು).

وَلَوْلَا فَضْلُ اللَّهِ عَلَيْكُمْ وَرَحْمَتُهُ
وَأَنَّ اللَّهَ تَوَّابٌ حَكِيمٌ ﴿١٠﴾

11. ಈ ಸುಳ್ಳಾರೋಪವನ್ನು ರಚಿಸಿ ತಂದವರು ನಿಮ್ಮೊಳಗೇ ಇರುವ ಒಂದು ಕೂಟವಾಗಿದ್ದಾರೆ.[9] ಈ ಘಟನೆಯನ್ನು ನಿಮ್ಮ ಪಾಲಿಗೆ ಕೆಟ್ಟದೆಂದು ಭಾವಿಸಬೇಡಿ. ನಿಜವಾಗಿ ಇದು ನಿಮಗೆ ಹಿತಕರವಾಗಿಯೇ ಇದೆ.[10] ಅದರಲ್ಲಿ ಯಾರು ಎಷ್ಟು ಭಾಗವಹಿಸಿದನೋ ಅಷ್ಟೇ ಪಾಪವನ್ನು ಶೇಖರಿಸಿಕೊಂಡನು. ಈ ಹೊಣೆಗಾರಿಕೆಯ ಪ್ರಮುಖ ಪಾಲು ವಹಿಸಿಕೊಂಡವನಿಗಂತೂ[11] ಮಹಾಯಾತನೆ ಇದೆ.

إِنَّ الَّذِينَ جَاءُوا بِالْإِفْكِ عُصْبَةٌ
مِنْكُمْ ۚ لَا تَحْسَبُوهُ شَرًّا لَكُمْ ۖ بَلْ
هُوَ خَيْرٌ لَكُمْ ۚ لِكُلِّ امْرِئٍ مِنْهُمْ
مَا اكْتَسَبَ مِنَ الْإِثْمِ ۚ وَالَّذِي تَوَلَّىٰ
كِبْرَهُ مِنْهُمْ لَهُ عَذَابٌ عَظِيمٌ ﴿١١﴾

12. ನೀವೆಲ್ಲರೂ ಅದನ್ನು ಕೇಳಿದಾಗ ಸತ್ಯವಿಶ್ವಾಸಿ ಸ್ತ್ರೀ-ಪುರುಷರು ತಮ್ಮ ಬಗ್ಗೆ ಸದ್ಭಾವನೆಯನ್ನೇಕೆ ತಾಳಲಿಲ್ಲ[12] ಮತ್ತು ಇದು ಅಪ್ಪಟ ಸುಳ್ಳಾರೋಪವೆಂದೇಕೆ ಹೇಳಲಿಲ್ಲ.

لَوْلَا إِذْ سَمِعْتُمُوهُ ظَنَّ الْمُؤْمِنُونَ
وَالْمُؤْمِنَاتُ بِأَنْفُسِهِمْ خَيْرًا وَقَالُوا
هَٰذَا إِفْكٌ مُبِينٌ ﴿١٢﴾

8. ಶರೀಅತ್‌ನ ಪಾರಿಭಾಷಿಕದಲ್ಲಿ ಇದನ್ನು 'ಲಿಆನ್' ಎನ್ನುತ್ತಾರೆ. 'ಲಿಆನ್' ಅನ್ನು ಮನೆಯಲ್ಲಿ ಕಾರ್ಯಗತಗೊಳಿಸುವಂತಿಲ್ಲ. ಅದು ನ್ಯಾಯಾಲಯದಲ್ಲಿ ನಡೆಯಬೇಕಾಗಿದೆ. 'ಲಿಆನ್'ನ ಬೇಡಿಕೆಯನ್ನು ಪುರುಷನೂ ಮುಂದಿರಿಸಬಹುದು. ಅಂತೆಯೇ ಸ್ತ್ರೀಯೂ ಕೂಡ. ಆರೋಪ ಹೊರಿಸಿದ ನಂತರ ಪುರುಷ 'ಲಿಆನ್'ನಿಂದ ಮುಕ್ತನಾಗ ಬಯಸಿದರೆ, ಅಥವಾ ಸ್ತ್ರೀ ಆಣೆ ಹಾಕುವುದರಿಂದ ದೂರ ಉಳಿದರೆ ಅದಕ್ಕೆ ಕೊಡಲಾಗುವ ಶಿಕ್ಷೆ ಹನಫೀ ಕರ್ಮಶಾಸ್ತ್ರದ ಪ್ರಕಾರ 'ಲಿಆನ್' ಮಾಡುವ ತನಕದ ಸೆರೆಮನೆ ವಾಸವಾಗಿದೆ. ಎರಡೂ ಕಡೆಯಿಂದ 'ಲಿಆನ್' ಆದ ಬಳಿಕ ಸ್ತ್ರೀ-ಪುರುಷರಿಬ್ಬರೂ ಪರಸ್ಪರರ ಪಾಲಿಗೆ ನಿಷಿದ್ಧರಾಗಿ ಬಿಡುತ್ತಾರೆ.

9. ಇಲ್ಲಿಂದ 26ನೆಯ ಸೂಕ್ತದ ವರೆಗೆ ಚರಿತ್ರೆಯಲ್ಲಿ 'ಇಫ್ಕ್'ನ ಘಟನೆಯಿಂದ ಉಲ್ಲೇಖಿಸಲ್ಪಟ್ಟಿರುವ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದರಲ್ಲಿ ಕಪಟ ವಿಶ್ವಾಸಿಗಳು ಹ. ಆಯಿಶಾರ(ರ) ಮೇಲೆಯೇ ವ್ಯಭಿಚಾರದ (ಶಾಂತಂ ಪಾಪಂ) ಆರೋಪ ಹೊರಿಸಿದ್ದರು. ಆ ಬಗ್ಗೆ ಅವರು ಎಷ್ಟು ಗುಲ್ಲೆಬ್ಬಿಸಿದ್ದರೆಂದರೆ ಅದರಿಂದಾಗಿ ಕೆಲವು ಮುಸ್ಲಿಮರೂ ಸಂಶಯಕ್ಕೊಳಗಾಗಿದ್ದರು.

10. ಅರ್ಥಾತ್- ಆತಂಕ ಪಡದಿರಿ. ಕಪಟವಿಶ್ವಾಸಿಗಳು ನಿಮ್ಮ ಮೇಲೆ ಪ್ರಬಲ ಪ್ರಹಾರ ಮಾಡಿರುವುದಾಗಿ ಭಾವಿಸಿಕೊಂಡಿದ್ದಾರೆ. ಆದರೆ ಅಲ್ಲಾಹನಿಚ್ಛಿಸಿದರೆ ಅದರಿಂದ ತದ್ವಿರುದ್ಧ ಪರಿಣಾಮ ಉಂಟಾಗುವುದು ಮತ್ತು ಅದು ನಿಮ್ಮ ಪಾಲಿಗೇ ಹಿತಕರವಾಗಿ ಪರಿಣಮಿಸುವುದು.

11. ಅರ್ಥಾತ್- ಅಬ್ದುಲ್ಲಾ ಬಿನ್ ಉಬೈ. ಈ ಆರೋಪವನ್ನು ಹುಟ್ಟುಹಾಕಿದ ಗೊಂದಲದ ಮೂಲ ಕಾರಣಕರ್ತ ಅವನೇ ಆಗಿದ್ದನು.

12. ಇನ್ನೊಂದು ಭಾಷಾಂತರ ಹೀಗಾಗಬಹುದು, ತಮ್ಮವರ, ತಮ್ಮ ಸಮಾಜದ ಅಥವಾ ತಮ್ಮ ಸಮುದಾಯದ ಜನರೊಂದಿಗೆ ಒಳ್ಳೆಯ

13. ಅವರು (ತಮ್ಮ ಆರೋಪಕ್ಕೆ ಆಧಾರವಾಗಿ) ನಾಲ್ಕು ಸಾಕ್ಷಿದಾರರನ್ನೇಕೆ ತರಲಿಲ್ಲ? ಅವರೀಗ ಸಾಕ್ಷಿಗಳನ್ನು ತಾರದಿರುವುದರಿಂದ ಅಲ್ಲಾಹನ ಬಳಿ ಅವರೇ ಸುಳ್ಳುಗಾರರಾಗಿರುತ್ತಾರೆ.[13]

لَوْلَا جَاءُو عَلَيْهِ بِأَرْبَعَةِ شُهَدَاءَ ۚ
فَإِذْ لَمْ يَأْتُوا بِالشُّهَدَاءِ فَأُولَٰئِكَ
عِندَ اللَّهِ هُمُ الْكَاذِبُونَ ﴿١٣﴾

14. ನಿಮ್ಮ ಮೇಲೆ ಇಹಲೋಕದಲ್ಲೂ ಪರಲೋಕದಲ್ಲೂ ಅಲ್ಲಾಹನ ಅನುಗ್ರಹವೂ ಕೃಪೆಯೂ ಇಲ್ಲದಿರುತ್ತಿದ್ದರೆ, ನೀವು ಸಿಲುಕಿದಂತಹ ವಿಷಯಗಳ ಫಲವಾಗಿ ಅತಿ ದೊಡ್ಡ ಯಾತನೆ ನಿಮ್ಮ ಮೇಲೆ ಎರಗುತ್ತಿತ್ತು.

وَلَوْلَا فَضْلُ اللَّهِ عَلَيْكُمْ وَرَحْمَتُهُ
فِي الدُّنْيَا وَالْآخِرَةِ لَمَسَّكُمْ فِي مَا
أَفَضْتُمْ فِيهِ عَذَابٌ عَظِيمٌ ﴿١٤﴾

15. ನಿಮ್ಮ ಒಂದು ನಾಲಿಗೆಯು ಇನ್ನೊಂದು ನಾಲಿಗೆಯಿಂದ ಈ ಸುಳ್ಳನ್ನೆತ್ತಿಕೊಂಡು ಹೋಗುತ್ತಿರುವಾಗ ಮತ್ತು ನಿಮಗೇನೂ ತಿಳಿಯದಂತಹ ವಿಷಯವನ್ನು ನಿಮ್ಮ ಬಾಯಿಯಿಂದ ಹೇಳುತ್ತ ಸಾಗುತ್ತಿದ್ದಾಗ (ನೀವೆಷ್ಟು ದೊಡ್ಡ ತಪ್ಪು ಮಾಡುತ್ತಿದ್ದೀರೆಂದು ಯೋಚಿಸಿರಿ). ನೀವು ಅದನ್ನು ಒಂದು ಸಣ್ಣ ವಿಷಯವೆಂದು ಭಾವಿಸುತ್ತಿದ್ದಿರಿ. ವಸ್ತುತಃ ಅಲ್ಲಾಹನ ಬಳಿ ಇದು ಅತ್ಯಂತ ಗಂಭೀರ ವಿಷಯವಾಗಿತ್ತು.

إِذْ تَلَقَّوْنَهُ بِأَلْسِنَتِكُمْ وَتَقُولُونَ
بِأَفْوَاهِكُم مَّا لَيْسَ لَكُم بِهِ عِلْمٌ
وَتَحْسَبُونَهُ هَيِّنًا وَهُوَ عِندَ اللَّهِ عَظِيمٌ ﴿١٥﴾

16. ನೀವು ಅದನ್ನು ಕೇಳಿದೊಡನೆಯೇ "ಇಂತಹ ಮಾತನ್ನುಚ್ಚರಿಸುವುದು ನಮಗೆ ಭೂಷಣವಲ್ಲ. ಅಲ್ಲಾಹನು ಪರಮಪಾವನನು. ಇದಂತೂ ಒಂದು ಮಹಾ ಸುಳ್ಳಾರೋಪವಾಗಿದೆ" ಎಂದೇಕೆ ಹೇಳಲಿಲ್ಲ?

وَلَوْلَا إِذْ سَمِعْتُمُوهُ قُلْتُم مَّا يَكُونُ
لَنَا أَن نَّتَكَلَّمَ بِهَٰذَا سُبْحَانَكَ هَٰذَا
بُهْتَانٌ عَظِيمٌ ﴿١٦﴾

ಗುಮಾನಿಯನ್ನಿಟ್ಟುಕೊಳ್ಳಲಿಲ್ಲವೇಕೆ. ಸೂಕ್ತದ ಪದಗಳು ಎರಡೂ ತಾತ್ಪರ್ಯಗಳನ್ನು ಒಳಗೊಂಡಿವೆ. ಆದರೆ ನಾವು ಅಳವಡಿಸಿರುವಂತಹ ಭಾಷಾಂತರ ಹೆಚ್ಚು ಅರ್ಥಪೂರ್ಣವಾಗಿದೆ. ಅರ್ಥಾತ್ ಹ. ಆಯಿಶಾರಿಗೆ(ರ) ಎದುರಾದಂತಹ ಪರಿಸ್ಥಿತಿಯೇ ತನಗೆ ಎದುರಾಗಿದ್ದರೆ ತಾನು ವ್ಯಭಿಚಾರಿಯಾಗಿ ಮಾರ್ಪಡುತ್ತೇನೆಯೇ ಎಂದು ನಿಮ್ಮಲ್ಲಿ ಪ್ರತಿಯೊಬ್ಬರೂ ಯಾಕೆ ಆಲೋಚಿಸಲಿಲ್ಲ.

13. ಆರೋಪ ಸುಳ್ಳು ಎನ್ನಲು ಆಧಾರ, ಸಾಕ್ಷಿಗಳು ಇಲ್ಲದಿರುವುದು ಮಾತ್ರವಾಗಿದೆ ಎಂಬ ತಪ್ಪುಕಲ್ಪನೆಗೆ ಯಾರೂ ಒಳಗಾಗಬಾರದು. ಅಂತೆಯೇ ನಾಲ್ಕು ಸಾಕ್ಷಿಗಳನ್ನು ತರಲು ಆರೋಪ ಹೊರಿಸಿದವರು ವಿಫಲರಾಗಿರುವುದರಿಂದ ನೀವೂ ಇದನ್ನು ಶುದ್ಧ ಸುಳ್ಳಾರೋಪ ಎಂದು ಭಾವಿಸಬೇಕಾಗಿ ಮುಸ್ಲಿಮರೊಡನೆ ಹೇಳಲಾಗುತ್ತಿದೆ ಎಂದು ಭಾವಿಸಬಾರದು. ಅಲ್ಲಿ ವಾಸ್ತವಿಕವಾಗಿ ಸಂಭವಿಸಿದ ಘಟನೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳದಿದ್ದಾಗ ಮಾತ್ರ ಇಂತಹ ತಪ್ಪುಕಲ್ಪನೆ ಮೂಡಲು ಸಾಧ್ಯ. ಆರೋಪ ಹೊರಿಸುವವರು ಅಥವಾ ಅವರ ಪೈಕಿ ಯಾರಾದರೊಬ್ಬರು ಪ್ರತ್ಯಕ್ಷವಾಗಿ ತಾವು ಹೇಳುತ್ತಿರುವಂತಹ ವಿಷಯವನ್ನು ಕಂಡಿದ್ದರಿಂದ ಪ್ರಸ್ತುತ ಆರೋಪ ಹೊರಿಸಿರಲಿಲ್ಲ. ಸಂದರ್ಭವಶಾತ್ ಹ. ಆಯಿಶಾ(ರ) ತಂಡದಿಂದ ಹಿಂದೆ ಉಳಿದು ಬಿಟ್ಟಿದ್ದರು ಮತ್ತು ಹ. ಸಫ್ವಾನ್(ರ) ಅನಂತರ ಅವರನ್ನು ತಮ್ಮ ಒಂಟೆಯ ಮೇಲೆ ಕುಳ್ಳಿರಿಸಿ ತಂಡದೊಂದಿಗೆ ಬಂದು ಸೇರಿದ್ದರೆಂಬ ಆಧಾರದಲ್ಲಿ ಮಾತ್ರ ಅವರು ಅಷ್ಟು ಗಂಭೀರವಾದ ಆರೋಪವನ್ನು ಹುಟ್ಟು ಹಾಕಿದ್ದರು. ಹ. ಆಯಿಶಾ(ರ) ಈ ರೀತಿ ಯೋಜನಾಬದ್ಧವಾಗಿ ಹಿಂದುಳಿದಿದ್ದರು ಎಂದು ವಿವೇಕಮತಿಯಾದ ಯಾವನೂ ಭಾವಿಸಲಾರನು. ಸೇನಾನಿಯ ಪತ್ನಿ ಮೆಲ್ಲನೆ ಒಬ್ಬ ವ್ಯಕ್ತಿಯೊಡನೆ ಹಿಂದೆ ಉಳಿದು ಬಿಡುವುದು, ಅನಂತರ ಅದೇ ವ್ಯಕ್ತಿ ಆ ಮಹಿಳೆಯನ್ನು ಒಂಟೆಯಲ್ಲಿ ಕುಳ್ಳಿರಿಸಿ ಹಾಡು ಹಗಲಲ್ಲಿ ಮಧ್ಯಾಹ್ನದ ಹೊತ್ತು ಸೇನಾ ತುಕಡಿಯನ್ನು ಬಂದು ಸೇರುವುದು - ಹೀಗೆ ಕುತಂತ್ರ ಮಾಡುವವರು ಮಾಡಲು ಸಾಧ್ಯವಿಲ್ಲ. ಇದು ಅವರಿಬ್ಬರ ಮುಗ್ಧತೆಯನ್ನು ಸಾರಿ ಹೇಳಲು ಪರ್ಯಾಪ್ತವಿದೆ. ಇಂತಹ ಪರಿಸ್ಥಿತಿಯಲ್ಲಿ ಕಣ್ಣಾರೆ ಆ ಘಟನೆಯನ್ನು ನೋಡಿದ ಆಧಾರದಲ್ಲಿ ಮಾತ್ರ ಆರೋಪ ಹೊರಿಸಬಹುದಾಗಿತ್ತು. ಅಂತಹ ಅಕ್ರಮಿಗಳು ಯಾವ ಪರಿಸ್ಥಿತಿಯ ಆಧಾರದಲ್ಲಿ ಆರೋಪ ಹೊರಿಸಿದ್ದರೋ ಅದು ಯಾವುದೇ ರೀತಿಯ ಸಂದೇಹಗಳಿಗೆ ಆಸ್ಪದ ಕೊಡುವಂತಹುದಾಗಿರಲಿಲ್ಲ.

17. ನೀವು ಸತ್ಯವಿಶ್ವಾಸಿಗಳಾಗಿದ್ದರೆ ಮುಂದೆಂದೂ ಇಂತಹ ಕೃತ್ಯವೆಸಗ ಬಾರದೆಂದು ಅಲ್ಲಾಹನು ನಿಮಗೆ ಉಪದೇಶ ಮಾಡುತ್ತಾನೆ.

يَعِظُكُمُ اللّٰهُ اَنْ تَعُوْدُوْا لِمِثْلِهٖۤ اَبَدًا
اِنْ كُنْتُمْ مُّؤْمِنِيْنَ ﴿١٧﴾

18. ಅಲ್ಲಾಹನು ನಿಮಗೆ ಸುಸ್ಪಷ್ಟ ಆದೇಶಗಳನ್ನೀಯುತ್ತಾನೆ ಮತ್ತು ಅವನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَ يُبَيِّنُ اللّٰهُ لَكُمُ الْاٰيٰتِ ؕ وَ اللّٰهُ
عَلِيْمٌ حَكِيْمٌ ﴿١٨﴾

19. ಸತ್ಯವಿಶ್ವಾಸ ಸ್ವೀಕರಿಸಿಕೊಂಡವರ ಸಮೂಹದಲ್ಲಿ ಅಶ್ಲೀಲತೆ ಹರಡಬೇಕೆಂದು ಬಯಸುವವರು ಇಹಲೋಕದಲ್ಲೂ ಪರಲೋಕ ದಲ್ಲೂ ವೇದನಾಯುಕ್ತ ಶಿಕ್ಷೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಬಲ್ಲವನು; ನೀವು ಬಲ್ಲವರಲ್ಲ;

اِنَّ الَّذِيْنَ يُحِبُّوْنَ اَنْ تَشِيْعَ الْفَاحِشَةُ
فِى الَّذِيْنَ اٰمَنُوْا لَهُمْ عَذَابٌ اَلِيْمٌ ۙ
فِى الدُّنْيَا وَ الْاٰخِرَةِ ؕ وَ اللّٰهُ يَعْلَمُ
وَ اَنْتُمْ لَا تَعْلَمُوْنَ ﴿١٩﴾

20. ನಿಮ್ಮ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಅವನ ಕೃಪೆ ಇಲ್ಲ ದಿರುತ್ತಿದ್ದರೆ ಮತ್ತು ಅಲ್ಲಾಹನು ಮಹಾ ವತ್ಸಲನೂ ಕರುಣಾ ನಿಧಿಯೂ ಆಗಿಲ್ಲದಿರುತ್ತಿದ್ದರೆ (ಈಗ ತಾನೇ ನಿಮ್ಮ ಮಧ್ಯೆ ಹರಡಲ್ಪಟ್ಟ ವಿಷಯವು ಅತ್ಯಂತ ಕೆಟ್ಟ ಪರಿಣಾಮಗಳನ್ನು ತೋರಿಸಿ ಬಿಡುತ್ತಿತ್ತು).

وَلَوْلَا فَضْلُ اللّٰهِ عَلَيْكُمْ وَرَحْمَتُهٗ
وَاَنَّ اللّٰهَ رَءُوْفٌ رَّحِيْمٌ ﴿٢٠﴾ ع

21. ಸತ್ಯವಿಶ್ವಾಸಿಗಳೇ, ಶೈತಾನನ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯಬೇಡಿರಿ. ಯಾರಾದರೂ ಅವನನ್ನನುಸರಿಸಿದರೆ, ಅವನು ಆತನಿಗೆ ಅಶ್ಲೀಲ ಹಾಗೂ ಪಾಪದ ಆಜ್ಞೆಯನ್ನೇ ಕೊಡುವನು. ನಿಮ್ಮ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಲ್ಲದಿರುತ್ತಿದ್ದರೆ, ನಿಮ್ಮ ಪೈಕಿ ಒಬ್ಬನೂ ಪರಿಶುದ್ಧನಾಗಲಾರ. ಆದರೆ ಅಲ್ಲಾಹನೇ ತಾನಿಚ್ಛಿಸಿದವರನ್ನು ಪರಿಶುದ್ಧಗೊಳಿಸುತ್ತಾನೆ ಮತ್ತು ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

يٰۤاَيُّهَا الَّذِيْنَ اٰمَنُوْا لَا تَتَّبِعُوْا خُطُوٰتِ
الشَّيْطٰنِ ؕ وَمَنْ يَّتَّبِعْ خُطُوٰتِ الشَّيْطٰنِ
فَاِنَّهٗ يَاْمُرُ بِالْفَحْشَآءِ وَالْمُنْكَرِ ؕ
وَلَوْلَا فَضْلُ اللّٰهِ عَلَيْكُمْ وَرَحْمَتُهٗ
مَا زَكٰى مِنْكُمْ مِّنْ اَحَدٍ اَبَدًا ۙ وَّلٰكِنَّ
اللّٰهَ يُزَكِّىْ مَنْ يَّشَآءُ ؕ وَاللّٰهُ سَمِيْعٌ عَلِيْمٌ ﴿٢١﴾

22. ನಿಮ್ಮಲ್ಲಿ ಅನುಗ್ರಹೀತರು ಮತ್ತು ಸಾಮರ್ಥ್ಯವುಳ್ಳವರು ತಮ್ಮ ಸಂಬಂಧಿಕರಿಗೂ ದರಿದ್ರರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವವರಿಗೂ ಸಹಾಯ ಮಾಡಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡಿ ಬಿಡಬಾರದು. ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ಅಲ್ಲಾಹನು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಅಲ್ಲಾಹ್ ಅತ್ಯಂತ ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.[14]

وَلَا يَاْتَلِ اُولُوا الْفَضْلِ مِنْكُمْ وَالسَّعَةِ
اَنْ يُّؤْتُوْۤا اُولِى الْقُرْبٰى وَالْمَسٰكِيْنَ
وَالْمُهٰجِرِيْنَ فِىْ سَبِيْلِ اللّٰهِ ۖ وَلْيَعْفُوْا
وَلْيَصْفَحُوْا ؕ اَلَا تُحِبُّوْنَ اَنْ يَّغْفِرَ
اللّٰهُ لَكُمْ ؕ وَاللّٰهُ غَفُوْرٌ رَّحِيْمٌ ﴿٢٢﴾

14. ಆರೋಪ ಹೊರಿಸುವವರ ಜತೆ ಕೆಲವು ಮುಗ್ಧ ಮುಸ್ಲಿಮರೂ ಸೇರಿಕೊಂಡಿದ್ದ ಹಿನ್ನೆಲೆಯಲ್ಲಿ ಈ ಸೂಕ್ತ ಅವತೀರ್ಣಗೊಂಡಿದೆ. ಆ ಪೈಕಿ ಹ. ಅಬೂಬಕರ್‌ರ(ರ) ಹತ್ತಿರದ ಸಂಬಂಧಿಯೊಬ್ಬರೂ ಸೇರಿದ್ದರು. ಅವರಿಗೆ ಹ. ಅಬೂಬಕರ್(ರ) ಸದಾ ಉಪಕಾರ ಮಾಡುತ್ತಿದ್ದರು. ಈ ವೇದನಾಯುಕ್ತ ಘಟನೆಯ ಬಳಿಕ ಹ. ಅಬೂಬಕರ್(ರ) ಅವರಿಗೆ ಇನ್ನೆಂದೂ ಉಪಕಾರ ಮಾಡದಿರುವ ಶಪಥ

23. ಸುಶೀಲೆಯರಾದ, ಮುಗ್ಧೆಯರಾದ ಸತ್ಯವಿಶ್ವಾಸಿನಿಯರ ಮೇಲೆ ಸುಳ್ಳಾರೋಪ ಹೊರಿಸುವವರನ್ನು ಈ ಲೋಕದಲ್ಲೂ ಪರಲೋಕ ದಲ್ಲೂ ಶಪಿಸಲಾಗಿದೆ ಮತ್ತು ಅವರಿಗಾಗಿ ಮಹಾ ಯಾತನೆ ಇದೆ.

إِنَّ الَّذِينَ يَرْمُونَ الْمُحْصَنَاتِ الْغَافِلَاتِ الْمُؤْمِنَاتِ لُعِنُوا فِي الدُّنْيَا وَالْآخِرَةِ وَلَهُمْ عَذَابٌ عَظِيمٌ ﴿٢٣﴾

24. ಅವರು ತಮ್ಮ ನಾಲಗೆಗಳೂ ಕೈಕಾಲುಗಳೂ ಅವರ ಕೃತ್ಯಗಳ ಸಾಕ್ಷ್ಯ ಹೇಳಲಿರುವ ಆ ದಿನವನ್ನು ಮರೆಯದಿರಲಿ.

يَوْمَ تَشْهَدُ عَلَيْهِمْ أَلْسِنَتُهُمْ وَأَيْدِيهِمْ وَأَرْجُلُهُمْ بِمَا كَانُوا يَعْمَلُونَ ﴿٢٤﴾

25. ಅಂದು ಅಲ್ಲಾಹನು ಅವರಿಗೆ ತಕ್ಕುದಾದ ಪ್ರತಿಫಲವನ್ನು ಸಂಪೂರ್ಣವಾಗಿ ಕೊಡುವನು ಮತ್ತು ಅಲ್ಲಾಹನೇ ಪರಮಸತ್ಯನು ಮತ್ತು ಸತ್ಯವನ್ನು ಸತ್ಯವೆಂದು ಸಾಧಿಸಿ ತೋರಿಸುವವನು ಎಂಬುದು ಅವರಿಗೆ ತಿಳಿಯುವುದು.

يَوْمَئِذٍ يُوَفِّيهِمُ اللَّهُ دِينَهُمُ الْحَقَّ وَيَعْلَمُونَ أَنَّ اللَّهَ هُوَ الْحَقُّ الْمُبِينُ ﴿٢٥﴾

26. ದುಶ್ಶೀಲೆಯರು ದುಶ್ಶೀಲರಿಗಾಗಿ ಮತ್ತು ದುಶ್ಶೀಲರು ದುಶ್ಶೀಲೆಯರಿಗಾಗಿರುವರು. ಸುಶೀಲೆಯರು ಸುಶೀಲರಿಗಾಗಿ ಮತ್ತು ಸುಶೀಲರು ಸುಶೀಲೆಯರಿಗಾಗಿರುವರು. ಜನರು ಆಡುತ್ತಿರುವ ಮಾತುಗಳಿಂದ ಅವರು ಮುಕ್ತರಾಗಿರುತ್ತಾರೆ. ಅವರಿಗಾಗಿ ಕ್ಷಮೆ ಇದೆ ಮತ್ತು ಸನ್ಮಾನ್ಯ ಜೀವನಾಧಾರವಿದೆ.

الْخَبِيثَاتُ لِلْخَبِيثِينَ وَالْخَبِيثُونَ لِلْخَبِيثَاتِ ۖ وَالطَّيِّبَاتُ لِلطَّيِّبِينَ وَالطَّيِّبُونَ لِلطَّيِّبَاتِ ۚ أُولَٰئِكَ مُبَرَّءُونَ مِمَّا يَقُولُونَ ۖ لَهُمْ مَغْفِرَةٌ وَرِزْقٌ كَرِيمٌ ﴿٢٦﴾

27. ಸತ್ಯವಿಶ್ವಾಸಿಗಳೇ[15] ನಿಮ್ಮ ಮನೆಗಳ ಹೊರತು ಇತರರ ಮನೆಗಳಿಗೆ ಅವರ ಒಪ್ಪಿಗೆ ಪಡೆಯದೆ ಹಾಗೂ ಮನೆಯವರಿಗೆ ಸಲಾಮ್ ಹೇಳದೆ ಪ್ರವೇಶಿಸಬೇಡಿ. ಈ ಕ್ರಮವು ನಿಮ್ಮ ಮಟ್ಟಿಗೆ ಉತ್ತಮ. ನೀವು ಇದನ್ನು ಗಮನದಲ್ಲಿರಿಸುವಿರೆಂದು ನಿರೀಕ್ಷಿಸಲಾಗಿದೆ.

يَا أَيُّهَا الَّذِينَ آمَنُوا لَا تَدْخُلُوا بُيُوتًا غَيْرَ بُيُوتِكُمْ حَتَّىٰ تَسْتَأْنِسُوا وَتُسَلِّمُوا عَلَىٰ أَهْلِهَا ۚ ذَٰلِكُمْ خَيْرٌ لَكُمْ لَعَلَّكُمْ تَذَكَّرُونَ ﴿٢٧﴾

28. ಇನ್ನು ಅಲ್ಲಿ ಯಾರೂ ಕಾಣಸದಿದ್ದರೆ ನಿಮಗೆ ಅನುಮತಿ ಸಿಗುವ ವರೆಗೂ ಅದರೊಳಗೆ ಪ್ರವೇಶಿಸಬೇಡಿರಿ[16] ಮತ್ತು ಮರಳಿ

فَإِنْ لَمْ تَجِدُوا فِيهَا أَحَدًا فَلَا تَدْخُلُوهَا

ಮಾಡಿದರು. ಆದರೆ ಅಲ್ಲಾಹನಿಗೆ ಹ. ಅಬೂಬಕರ್ ಸಿದ್ದೀಕ್‌ರಂತಹ(ರ) ವ್ಯಕ್ತಿ ಕ್ಷಮೆಯ ಧೋರಣೆಯನ್ನು ಅನುಸರಿಸದೇ ಇರುವುದು ಇಷ್ಟವಾಗಲಿಲ್ಲ.

15. ಅಧ್ಯಾಯದ ಆರಂಭದಲ್ಲಿ ನೀಡಲಾದ ಆದೇಶಗಳ ಉದ್ದೇಶ ಸಮಾಜದಲ್ಲಿ ಯಾವುದೇ ರೀತಿಯ ಕೆಡುಕು ತಲೆದೋರಿದರೆ ಅದನ್ನು ನಿವಾರಿಸುವುದು ಹೇಗೆ ಎಂಬುದಕ್ಕಾಗಿತ್ತು. ಮುಂದೆ ನೀಡಲಾಗಿರುವ ಆದೇಶಗಳಲ್ಲಿ ಕೆಡುಕುಗಳು ಸಮಾಜದಲ್ಲಿ ಹುಟ್ಟುವುದನ್ನೂ ಮೂಲದಲ್ಲೇ ತಡೆಗಟ್ಟುವ, ನಾಗರಿಕತೆಯ ರೀತಿ-ನೀತಿಗಳನ್ನು ತಿದ್ದುವ ಮತ್ತು ಕೆಡುಕಿನ ಉಗಮಕ್ಕೆ ಕಾರಣವಾದ ಅಂಶಗಳನ್ನೇ ಕೊನೆಗೊಳಿಸಿಬಿಡುವಂತಹ ಆದೇಶಗಳನ್ನು ಕೊಡಲಾಗಿದೆ.

16. ಅರ್ಥಾತ್- ಖಾಲಿಯಾಗಿರುವ ಯಾರ ಮನೆಗೂ ಪ್ರವೇಶಿಸುವುದು ಧರ್ಮಸಮ್ಮತವಲ್ಲ. ಮನೆಯ ಯಜಮಾನ ಸ್ವತಃ ಅವನಿಗೆ ಅದರ ಅನುಮತಿ ಕೊಟ್ಟಿದ್ದರೆ ಅಭ್ಯಂತರವಿಲ್ಲ. ಉದಾ: ನಾನಿಲ್ಲದಿದ್ದರೂ ನೀವು ನನ್ನ ಕೋಣೆಯಲ್ಲಿ ಕುಳಿತಿರಿ ಎಂದು ಅವನು ನಿಮ್ಮೊಡನೆ ಹೇಳಿರುವುದು ಅಥವಾ ಅವನು ಬೇರೆ ಸ್ಥಳದಲ್ಲಿದ್ದು ನೀವು ಬಂದ ಸಮಾಚಾರ ತಿಳಿದು ಮನೆಯಲ್ಲಿ ಕುಳಿತಿರಿ, ನಾನು ಈಗ ಬರುತ್ತೇನೆ ಎಂದು ಹೇಳಿ ಕಳುಹಿಸಿರುವುದೇ ಮುಂತಾದ ಸಂದರ್ಭಗಳಲ್ಲಿ.

ಹೋಗಿರೆಂದು ನಿಮ್ಮೊಡನೆ ಹೇಳಲಾದರೆ ಮರಳಿ ಬಿಡಿರಿ. ಇದು ನಿಮ್ಮ ಪಾಲಿಗೆ ಹೆಚ್ಚು ಪರಿಶುದ್ಧವಾದ ಕ್ರಮ[17] ಮತ್ತು ನೀವು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹನು ಚೆನ್ನಾಗಿ ತಿಳಿದಿರುತ್ತಾನೆ.

حَتّٰى يُؤْذَنَ لَكُمْ ۚ وَاِنْ قِيْلَ لَكُمُ
ارْجِعُوْا فَارْجِعُوْا هُوَ اَزْكٰى لَكُمْ ۗ
وَاللّٰهُ بِمَا تَعْمَلُوْنَ عَلِيْمٌ ﴿٢٨﴾

29. ಆದರೆ ಯಾರೂ ವಾಸಿಸದಂತಹ ಮತ್ತು ನಿಮಗೆ ಉಪಯೋಗದ ವಸ್ತುವೇನಾದರೂ ಇರುವಂತಹ ನಿವಾಸದೊಳಗೆ ಪ್ರವೇಶಿಸುವುದರಲ್ಲಿ ಅಡ್ಡಿಯಿಲ್ಲ.[18] ನೀವು ಪ್ರಕಟಗೊಳಿಸುವುದನ್ನೂ ಬಚ್ಚಿಡುವುದನ್ನೂ ಅಲ್ಲಾಹನು ಅರಿಯುವನು.

لَيْسَ عَلَيْكُمْ جُنَاحٌ اَنْ تَدْخُلُوْا بُيُوْتًا
غَيْرَ مَسْكُوْنَةٍ فِيْهَا مَتَاعٌ لَّكُمْ ۗ وَاللّٰهُ
يَعْلَمُ مَا تُبْدُوْنَ وَمَا تَكْتُمُوْنَ ﴿٢٩﴾

30. ಪೈಗಂಬರರೇ, ಸತ್ಯವಿಶ್ವಾಸಿಗಳೊಡನೆ ತಮ್ಮ ದೃಷ್ಟಿಗಳನ್ನು ಕೆಳಗಿರಿಸಿ ಕೊಳ್ಳಲಿಕ್ಕೂ[19] ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿಕ್ಕೂ ಹೇಳಿರಿ. ಇದು ಅವರ ಪಾಲಿಗೆ ಹೆಚ್ಚು ಪರಿಶುದ್ಧವಾದ ಕ್ರಮವಾಗಿದೆ. ಅಲ್ಲಾಹನು ಅವರು ಮಾಡುವುದೆಲ್ಲವನ್ನೂ ಅರಿಯುವವನಾಗಿದ್ದಾನೆ.

قُلْ لِّلْمُؤْمِنِيْنَ يَغُضُّوْا مِنْ اَبْصَارِهِمْ
وَيَحْفَظُوْا فُرُوْجَهُمْ ۗ ذٰلِكَ اَزْكٰى لَهُمْ ۗ
اِنَّ اللّٰهَ خَبِيْرٌۢ بِمَا يَصْنَعُوْنَ ﴿٣٠﴾

31. ಪೈಗಂಬರರೇ, ಸತ್ಯವಿಶ್ವಾಸಿನಿಯರೊಡನೆ ಹೇಳಿರಿ - ಅವರು ತಮ್ಮ ದೃಷ್ಟಿಗಳನ್ನು ಕೆಳಗಿರಿಸಿ ಕೊಳ್ಳಲಿ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿ[20] ಮತ್ತು ತಮ್ಮ ಶೃಂಗಾರಗಳನ್ನು ತೋರಿಸದಿರಲಿ (ಆದರೆ) ಸ್ವಯಂ ಪ್ರಕಟವಾಗುವಂತಹವುಗಳನ್ನು ಹೊರತು. ಮತ್ತು ತಮ್ಮ ಎದೆಯ ಮೇಲೆ ತಮ್ಮ ಮೇಲು ಹೊದಿಕೆಯ

وَقُلْ لِّلْمُؤْمِنٰتِ يَغْضُضْنَ مِنْ اَبْصَارِهِنَّ
وَيَحْفَظْنَ فُرُوْجَهُنَّ وَلَا يُبْدِيْنَ
زِيْنَتَهُنَّ اِلَّا مَا ظَهَرَ مِنْهَا وَلْيَضْرِبْنَ
بِخُمُرِهِنَّ عَلٰى جُيُوْبِهِنَّ ۖ وَلَا يُبْدِيْنَ
زِيْنَتَهُنَّ اِلَّا لِبُعُوْلَتِهِنَّ اَوْ اٰبَآئِهِنَّ اَوْ اٰبَآءِ

17. ಅರ್ಥಾತ್- ಆ ಬಗ್ಗೆ ಬೇಸರಿಸಬಾರದು. ಭೇಟಿಯಾಗ ಬಯಸದಿದ್ದರೆ ಅದನ್ನು ನಿರಾಕರಿಸುವಂತಹ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಇದೆ. ಹಾಗೆಯೇ ಯಾವುದಾದರೂ ಕಾರ್ಯಮಗ್ನತೆಯಿಂದಾಗಿ ಭೇಟಿಯಾಗಲು ಸಾಧ್ಯವಿಲ್ಲದಿದ್ದರೆ ವಿಷಾದದೊಂದಿಗೆ ಮರಳಿಸುವ ಅಧಿಕಾರ ಅವನಿಗಿದೆ.

18. ಅರ್ಥಾತ್- ಹೋಟೆಲ್, ವಿಹಾರಧಾಮ, ಅತಿಥಿಗೃಹ, ಅಂಗಡಿ, ಪ್ರವಾಸಧಾಮ ಮುಂತಾದ ಜನರ ಪ್ರವೇಶಕ್ಕೆ ಮುಕ್ತ ಅವಕಾಶವಿರುವ ಸ್ಥಳಗಳು.

19. ಮೂಲದಲ್ಲಿ 'ಗದ್ದೆ ಬಸರ್' ಅಥವಾ ದೃಷ್ಟಿಯನ್ನು ಕೆಳಗಿರಿಸುವ ಆದೇಶ ಕೊಡಲಾಗಿದೆ. ಪ್ರಸ್ತುತ ಪದವನ್ನು 'ದೃಷ್ಟಿಯನ್ನು ಕೆಳಗಿರಿಸುವುದು' ಎಂದು ಭಾಷಾಂತರಿಸಲಾಗುತ್ತದಾದರೂ ಅದರ ಅರ್ಥ, ಸದಾ ಕೆಳಗೇ ನೋಡುತ್ತಿರಬೇಕು ಎಂದಲ್ಲ. ಬದಲಾಗಿ ಎವೆಯಿಕ್ಕದೆ ಕಣ್ತುಂಬ ನೋಡಬಾರದು ಅಥವಾ ಕಣ್ಣನ್ನು ಮುಕ್ತವಾಗಿ ಬಿಟ್ಟು ನೋಡಬಾರದು ಎಂದಾಗಿದೆ. ದೃಷ್ಟಿಯನ್ನು ನಿಯಂತ್ರಿಸುವುದು ಎಂದೂ ಅದನ್ನು ಹೇಳಬಹುದು. ಅರ್ಥಾತ್ ಯಾವುದನ್ನು ನೋಡುವುದು ಸಮಂಜಸವಲ್ಲವೋ ಅದರಿಂದ ದೃಷ್ಟಿಯನ್ನು ಬೇರೆಡೆಗೆ ಸರಿಸುವುದು, ಹಾಗೆ ಮಾಡಲಿಕ್ಕಾಗಿ ಅವನು ಕೆಳಗೆ ನೋಡಿದರೂ ಅಥವಾ ಬೇರಾವ ಕಡೆಗೆ ದೃಷ್ಟಿಹರಿಸಿದರೂ ಸರಿಯೇ. ಹಿನ್ನೆಲೆಯನ್ನು ಗಮನಿಸಿದಾಗ ಪುರುಷರು ಸ್ತ್ರೀಯರನ್ನು ನೋಡುವುದು, ಇನ್ನೊಬ್ಬರ ಲಜ್ಜಾಂಗಗಳ ಮೇಲೆ ದೃಷ್ಟಿಹರಿಸುವುದು ಅಥವಾ ಅಶ್ಲೀಲ ದೃಶ್ಯಗಳನ್ನು ನೋಡುವುದರ ಕುರಿತು ಈ ನಿರ್ಬಂಧ ವಿಧಿಸಲಾಗಿದೆ ಎಂದು ವ್ಯಕ್ತವಾಗುತ್ತದೆ.

20. ಅಲ್ಲಾಹನ ಶರೀಅತ್ ಪುರುಷರ ಮುಂದಿರಿಸಿದಷ್ಟೇ ಬೇಡಿಕೆಗಳನ್ನು ಸ್ತ್ರೀಯರ ಮುಂದೆ ಇರಿಸುವುದಿಲ್ಲವೆಂಬುದು ಗಮನಾರ್ಹ. ಅರ್ಥಾತ್ ದೃಷ್ಟಿಯನ್ನು ಕೆಳಗಿರಿಸುವುದು ಮತ್ತು ಗುಪ್ತಾಂಗಗಳನ್ನು ರಕ್ಷಿಸುವುದು ಮಾತ್ರ ಅವರ ಕರ್ತವ್ಯವಲ್ಲ. ಪುರುಷನ ಮುಂದಿಡಲಾಗದಂತಹ ಕೆಲವೊಂದು ಬೇಡಿಕೆಗಳನ್ನೂ ಅವರ ಮುಂದಿಡಲಾಗುತ್ತದೆ. ಇದರಿಂದ ಈ ವಿಷಯದಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನರಲ್ಲವೆಂದು ವ್ಯಕ್ತವಾಗುತ್ತದೆ.

ಸೆರಗನ್ನು ಹಾಕಿಕೊಂಡಿರಲಿ. ಅವರು ತಮ್ಮ ಶೃಂಗಾರವನ್ನು ಇವರ ಹೊರತು ಇತರರಿಗೆ ತೋರಿಸದಿರಲಿ- ಪತಿಯರು, ತಂದೆಯರು, ಪತಿಯ ತಂದೆಯರು[21], ತಮ್ಮ ಪುತ್ರರು, ಪತಿಯರ ಪುತ್ರರು[22], ಸಹೋದರರು[23], ಸಹೋದರ ಪುತ್ರರು, ಸಹೋದರಿಯರ ಪುತ್ರರು[24], ಆಪ್ತ ಸ್ತ್ರೀಯರು[25], ತಮ್ಮ ದಾಸಿಯರು, ಯಾವುದೇ ದುರಪೇಕ್ಷೆ ಇಲ್ಲದಂತಹ ಅಧೀನ ಸೇವಕರು[26] ಮತ್ತು ಇನ್ನೂ ಸ್ತ್ರೀಯರ ರಹಸ್ಯ ವಿಷಯಗಳನ್ನರಿಯದ ಬಾಲಕರು. ಅವರು, ತಾವು ಮರೆಸಿಟ್ಟಿರುವಂತಹ ಅಲಂಕಾರದ ಅರಿವು ಜನರಿಗಾಗುವಂತೆ ತಮ್ಮ ಪಾದಗಳನ್ನು ನೆಲಕ್ಕೆ ಬಡಿಯುತ್ತಾ ನಡೆಯದಿರಲಿ. ಸತ್ಯ ವಿಶ್ವಾಸಿಗಳೇ! ನೀವೆಲ್ಲರೂ ಸೇರಿ ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡಿರಿ. ನಿಮಗೆ ಯಶಸ್ಸು ಪ್ರಾಪ್ತಿಯಾಗಲೂ ಬಹುದು.

بُعُوْلَتِهِنَّ اَوْ اٰبَنَآئِهِنَّ اَوْ اَبْنَآءِ بُعُوْلَتِهِنَّ اَوْ اِخْوَانِهِنَّ اَوْ بَنِيْٓ اِخْوَانِهِنَّ اَوْ بَنِيْٓ اَخَوٰتِهِنَّ اَوْ نِسَآئِهِنَّ اَوْ مَا مَلَكَتْ اَيْمَانُهُنَّ اَوِ التّٰبِعِيْنَ غَيْرِ اُولِي الْاِرْبَةِ مِنَ الرِّجَالِ اَوِ الطِّفْلِ الَّذِيْنَ لَمْ يَظْهَرُوْا عَلٰى عَوْرٰتِ النِّسَآءِ ۪ وَلَا يَضْرِبْنَ بِاَرْجُلِهِنَّ لِيُعْلَمَ مَا يُخْفِيْنَ مِنْ زِيْنَتِهِنَّ ۭ وَتُوْبُوْٓا اِلَى اللّٰهِ جَمِيْعًا اَيُّهَ الْمُؤْمِنُوْنَ لَعَلَّكُمْ تُفْلِحُوْنَ ۝٣١

32. ನಿಮ್ಮಲ್ಲಿ ಒಂಟಿಯಾಗಿರುವವರ ಮತ್ತು ನಿಮ್ಮ ದಾಸ-ದಾಸಿಯರಲ್ಲಿ ಸಜ್ಜನರಾಗಿರುವವರ ವಿವಾಹ ಮಾಡಿ ಬಿಡಿರಿ. ಅವರು ಬಡವರಾಗಿದ್ದರೆ ಅಲ್ಲಾಹ್ ತನ್ನ ಅನುಗ್ರಹದಿಂದ ಅವರನ್ನು ಸಂಪನ್ನಗೊಳಿಸುವನು. ಅಲ್ಲಾಹ್ ಅತಿ ವಿಶಾಲನೂ ಸರ್ವಜ್ಞನೂ ಆಗಿರುತ್ತಾನೆ.

وَاَنْكِحُوا الْاَيَامٰى مِنْكُمْ وَالصّٰلِحِيْنَ مِنْ عِبَادِكُمْ وَاِمَآئِكُمْ ۭ اِنْ يَّكُوْنُوْا فُقَرَآءَ يُغْنِهِمُ اللّٰهُ مِنْ فَضْلِهٖ ۭ وَاللّٰهُ وَاسِعٌ عَلِيْمٌ ۝٣٢

33. ವಿವಾಹಾನುಕೂಲತೆ ಒದಗದವರು ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನಗೊಳಿಸುವವರೆಗೂ ಸಚ್ಚಾರಿತ್ರ್ಯವನ್ನು ಕಾಯ್ದುಕೊಳ್ಳಬೇಕು ಮತ್ತು ನಿಮ್ಮ ದಾಸರ ಪೈಕಿ ವಿಮೋಚನಾ ಕರಾರಿಗಾಗಿ ನಿವೇದಿಸಿಕೊಳ್ಳುವವರಲ್ಲಿ ಒಳಿತಿದೆ ಎಂದು ನಿಮಗೆ ತಿಳಿದು ಬಂದರೆ[27] ಅವರೊಡನೆ ವಿಮೋಚನಾ ಕರಾರು

وَلْيَسْتَعْفِفِ الَّذِيْنَ لَا يَجِدُوْنَ نِكَاحًا حَتّٰى يُغْنِيَهُمُ اللّٰهُ مِنْ فَضْلِهٖ ۭ وَالَّذِيْنَ يَبْتَغُوْنَ الْكِتٰبَ مِمَّا مَلَكَتْ اَيْمَانُكُمْ فَكَاتِبُوْهُمْ اِنْ عَلِمْتُمْ فِيْهِمْ خَيْرًا ۖ

21. 'ತಂದೆ' ಎಂಬುದರಲ್ಲಿ ಅಜ್ಜ-ಮುತ್ತಜ್ಜ ಎಂಬ ಅರ್ಥವೂ ಅಡಕವಾಗಿದೆ. ಆದ್ದರಿಂದ ಸ್ತ್ರೀಯು ತನ್ನ ತಂದೆ ಮತ್ತು ಮಾವನ(ಪತಿಯ ತಂದೆ) ಮುಂದೆ ಬರುವಾಗ ಇರುವ ಸ್ಥಿತಿಯಲ್ಲೇ ಅಜ್ಜನ ಮನೆಯ ಎಲ್ಲಾ ಹಿರಿಯರ ಮುಂದೆಯೂ ಬರಬಹುದು.

22. ಪುತ್ರರು ಎಂಬ ಪದದಲ್ಲಿ ಮೊಮ್ಮಕ್ಕಳು, ಮರಿಮಕ್ಕಳು ಎಂಬ ಪದವೂ ಅಡಕವಾಗಿದೆ. ಈ ವಿಷಯದಲ್ಲಿ ಸ್ವಂತ ಮಕ್ಕಳು ಮತ್ತು ಮಲಮಕ್ಕಳು ಎಂಬ ಭೇದವನ್ನೂ ಕಲ್ಪಿಸಲಾಗಿಲ್ಲ. ತನ್ನ ಮಕ್ಕಳು ಮತ್ತು ಮೊಮ್ಮಕ್ಕಳ ಮುಂದೆ ಶೃಂಗಾರ ಪ್ರಕಟಣೆ ಮಾಡುವಂತೆಯೇ ತನ್ನ ಮಲಮಕ್ಕಳ ಸಂತಾನದ ಮುಂದೆಯೂ ಆಕೆ ಅಷ್ಟೇ ಸ್ವಾತಂತ್ರ್ಯದಿಂದ ಇರಬಹುದು.

23. 'ಸಹೋದರರು' ಎಂಬ ಪದದಲ್ಲಿ ಸ್ವಂತ ಸಹೋದರರೂ, ಮಲಸಹೋದರರೂ ಸೇರಿದ್ದಾರೆ.

24. ಸಹೋದರ-ಸಹೋದರಿಯರೆಂದರೆ ಮೂರೂ ವಿಧದ ಸಹೋದರ ಸಹೋದರಿಯರಾಗಿದ್ದಾರೆ. ಅವರ ಪುತ್ರರು ಮತ್ತು ಪೌತ್ರರು ಅವರ ಮಕ್ಕಳ ಸಾಲಿನಲ್ಲಿ ಸೇರುತ್ತಾರೆ.

25. ದುಶ್ಶೀಲೆಯರಾದ ಕೆಟ್ಟ ಸ್ತ್ರೀಯರ ಮುಂದೆ ಒಳ್ಳೆಯ ಮುಸ್ಲಿಮ್ ಸ್ತ್ರೀಯು ತಮ್ಮ ಸೌಂದರ್ಯವನ್ನು ಪ್ರಕಟಿಸಬಾರದೆಂದೂ ಇದರಿಂದ ಸಹಜವಾಗಿಯೇ ವ್ಯಕ್ತವಾಗುತ್ತದೆ.

26. ಅರ್ಥಾತ್- ಅಧೀನರಾಗಿರುವವರಾದ್ದರಿಂದ ಮನೆಯ ಸ್ತ್ರೀಯರ ಬಗ್ಗೆ ಯಾವುದೇ ಕೆಟ್ಟ ಭಾವನೆ ಹೊಂದುವ ಧೈರ್ಯ ತೋರುವ ಗುಮಾನಿಗೆ ಆಸ್ಪದ ಇಲ್ಲದಂತಹವರು.

27. ಒಳಿತು ಎಂದರೆ ಎರಡು ವಿಷಯಗಳಾಗಿವೆ. ಮೊದಲನೆಯದಾಗಿ ದಾಸನಲ್ಲಿ ವಿಮೋಚನಾ ಕರಾರಿನ ಮೊತ್ತವನ್ನು ಕೊಡಲು ಅರ್ಹತೆ

ಮಾಡಿಕೊಳ್ಳಿರಿ[28] ಮತ್ತು ಅಲ್ಲಾಹನು ಕೊಟ್ಟಿರುವ ಸಂಪತ್ತಿನಿಂದ ಅವರಿಗೆ ಕೊಡಿರಿ.[29] ನಿಮ್ಮ ದಾಸಿಯರು ಸ್ವತಃ ಸುಶೀಲೆಯರಾಗಿ ರಲು ಬಯಸುವಾಗ[30] ಅವರನ್ನು ಲೌಕಿಕ ಲಾಭಗಳಿಗಾಗಿ ವೇಶ್ಯಾ ವೃತ್ತಿಗೆ ನಿರ್ಬಂಧಿಸಬೇಡಿರಿ[31], ಅವರನ್ನು ಯಾರಾದರೂ ಒತ್ತಾಯಿ ಸಿದರೆ ಈ ಒತ್ತಡದ ಅನಂತರ ಅಲ್ಲಾಹ್ ಅವರ (ದಾಸಿಯರ) ಮಟ್ಟಿಗೆ ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುತ್ತಾನೆ.

وَّ اٰتُوْهُمْ مِّنْ مَّالِ اللّٰهِ الَّذِيْٓ اٰتٰىكُمْ ؕ
وَلَا تُكْرِهُوْا فَتَيٰتِكُمْ عَلَى الْبِغَآءِ اِنْ
اَرَدْنَ تَحَصُّنًا لِّتَبْتَغُوْا عَرَضَ الْحَيٰوةِ
الدُّنْيَا ؕ وَمَنْ يُّكْرِهْهُّنَّ فَاِنَّ اللّٰهَ مِنْۢ
بَعْدِ اِكْرَاهِهِنَّ غَفُوْرٌ رَّحِيْمٌ ﴿٣٣﴾

34. ನಾವು ಸುಸ್ಪಷ್ಟ ಮಾರ್ಗದರ್ಶನ ನೀಡುವ ಸೂಕ್ತಗಳನ್ನು ನಿಮ್ಮ ಬಳಿಗೆ ಕಳುಹಿಸಿದ್ದೇವೆ. ನಿಮಗಿಂತ ಮುಂಚೆ ಗತಿಸಿದ ಜನಾಂಗಗಳ ಬೋಧಪ್ರದ ದೃಷ್ಟಾಂತಗಳನ್ನೂ ಭಯವಿರಿಸಿಕೊಳ್ಳುವವರಿಗೆ ಉಪದೇಶಗಳನ್ನೂ ನಾವು ನಿಮ್ಮ ಮುಂದಿರಿಸಿದ್ದೇವೆ.

وَلَقَدْ اَنْزَلْنَآ اِلَيْكُمْ اٰيٰتٍ مُّبَيِّنٰتٍ وَّ
مَثَلًا مِّنَ الَّذِيْنَ خَلَوْا مِنْ قَبْلِكُمْ
وَمَوْعِظَةً لِّلْمُتَّقِيْنَ ﴿٣٤﴾

ربع

35. ಅಲ್ಲಾಹನು ಭೂಮಿ-ಆಕಾಶಗಳ ಪ್ರಕಾಶವಾಗಿರುವನು.[32] (ವಿಶ್ವದಲ್ಲಿ) ಅವನ ಪ್ರಕಾಶದ ಉಪಮೆ ಹೀಗಿದೆ; ಒಂದು ಗೋಡೆ ಗೂಡಿನಲ್ಲಿ ಒಂದು ದೀಪವನ್ನಿಡಲಾಗಿದೆ. ದೀಪವು ಒಂದು ಗಾಜಿನ ಬುರುಡೆಯೊಳಗಿದೆ. ಬುರುಡೆಯು ಮುತ್ತಿನಂತೆ ಹೊಳೆಯುವ ತಾರೆಯಂತಿದೆ. ಆ ದೀಪವನ್ನು ಪೌರ್ವಾತ್ಯವೂ ಪಾಶ್ಚಿಮಾತ್ಯವೂ ಅಲ್ಲದ ಇಪ್ಪೆಯ(Olive) ಒಂದು ಸಮೃದ್ಧ ಮರದ ಎಣ್ಣೆಯಿಂದ ಬೆಳಗಿಸಲಾಗುತ್ತದೆ. ಅದರ ಎಣ್ಣೆಗೆ ಬೆಂಕಿ ತಾಗದಿದ್ದರೂ ಅದು ತಾನಾಗಿಯೇ ಪ್ರಜ್ವಲಿಸುತ್ತದೆ. (ಹೀಗೆ) ಪ್ರಕಾಶದ ಮೇಲೆ ಪ್ರಕಾಶ (ವನ್ನು ವರ್ಧಿಸುವ ಎಲ್ಲಾ ಸಾಧನಗಳು ಒಟ್ಟುಗೂಡಿರುತ್ತವೆ)[33] ಅಲ್ಲಾಹನು ತಾನಿಚ್ಛಿಸಿದವರಿಗೆ ತನ್ನ

اَللّٰهُ نُوْرُ السَّمٰوٰتِ وَالْاَرْضِ ؕ مَثَلُ
نُوْرِهٖ كَمِشْكٰوةٍ فِيْهَا مِصْبَاحٌ ؕ اَلْمِصْبَاحُ
فِيْ زُجَاجَةٍ ؕ اَلزُّجَاجَةُ كَاَنَّهَا كَوْكَبٌ
دُرِّيٌّ يُّوْقَدُ مِنْ شَجَرَةٍ مُّبٰرَكَةٍ
زَيْتُوْنَةٍ لَّا شَرْقِيَّةٍ وَّلَا غَرْبِيَّةٍ ۙ
يَّكَادُ زَيْتُهَا يُضِيْٓءُ وَلَوْ لَمْ تَمْسَسْهُ
نَارٌ ؕ نُوْرٌ عَلٰى نُوْرٍ ؕ يَهْدِى اللّٰهُ لِنُوْرِهٖ
مَنْ يَّشَآءُ ؕ وَيَضْرِبُ اللّٰهُ الْاَمْثَالَ

ಇರಬೇಕು. ಎರಡನೆಯದಾಗಿ ಅವನಲ್ಲಿ ಅವನ ಮಾತಿಗೆ ಒಪ್ಪಿ ಕರಾರು ಮಾಡಬಹುದಾದಷ್ಟು ಪ್ರಾಮಾಣಿಕತೆ ಮತ್ತು ಸತ್ಯಸಂಧತೆ ಇರಬೇಕು.

28. ವಿಮೋಚನಾ ಕರಾರು ಮಾಡುವುದೆಂದರೆ, ಒಬ್ಬ ದಾಸ ಅಥವಾ ದಾಸಿ ತನ್ನ ಸ್ವಾತಂತ್ರ್ಯಕ್ಕಾಗಿ ಯಜಮಾನನಿಗೆ ಪರಿಹಾರ ನೀಡುವ ಪ್ರಸ್ತಾಪ ಮಾಡಿದಾಗ ಯಜಮಾನ ಅದನ್ನು ಸ್ವೀಕರಿಸಿಕೊಂಡರೆ ಆ ಕುರಿತು ಶರತ್ತುಗಳನ್ನು ದಾಖಲಿಸಬೇಕು.

29. ಇದು ಸಾರ್ವತ್ರಿಕ ಆದೇಶ. ಯಜಮಾನನು ಸ್ವಲ್ಪ ಮೊತ್ತವನ್ನು ಕ್ಷಮಿಸಿ ಬಿಡಬೇಕು. ಇತರ ಮುಸ್ಲಿಮರೂ ಅವನಿಗೆ ನೆರವಾಗಬೇಕು. ಬೈತುಲ್ ಮಾಲ್‌ನ ಮೂಲಕವೂ ಅವರಿಗೆ ನೆರವಾಗಬೇಕು.

30. ಅರ್ಥಾತ್- ದಾಸಿ ತನ್ನಿಚ್ಛೆಯಿಂದ ಅನೈತಿಕ ಕೆಲಸ ಮಾಡಿದ್ದರೆ ಆ ಅಪರಾಧಕ್ಕೆ ಆಕೆಯೇ ಜವಾಬ್ದಾರಳು. ಶಾಸನ ಈ ಅಪರಾಧಕ್ಕಾಗಿ ಆಕೆಯನ್ನೇ ತಪ್ಪಿತಸ್ಥಳೆಂದು ಪರಿಗಣಿಸುವುದು. ಆದರೆ ಆಕೆಯ ಯಜಮಾನ ಒತ್ತಾಯಪೂರ್ವಕವಾಗಿ ಆಕೆಯಿಂದ ಈ ಕೆಲಸ ಮಾಡಿಸಿದರೆ ಅದರ ಹೊಣೆಗಾರಿಕೆ ಯಜಮಾನನ ಮೇಲಿರುವುದು. ಆ ಅಪರಾಧಕ್ಕಾಗಿ ಅವನನ್ನೇ ತಪ್ಪಿತಸ್ಥನೆಂದು ಪರಿಗಣಿಸಲಾಗುವುದು.

31. ಅಜ್ಞಾನ ಕಾಲದಲ್ಲಿ ಅರಬರು ದಾಸಿಯರಿಂದ ವೇಶ್ಯಾವಾಟಿಕೆ ನಡೆಸುತ್ತಿದ್ದರು ಮತ್ತು ಅದರ ಸಂಪಾದನೆಯನ್ನು ಉಪಯೋಗಿಸುತ್ತಿದ್ದರು. ಇಸ್ಲಾಮ್ ಈ ವೃತ್ತಿಯನ್ನು ನಿಷೇಧಿಸಿತು.

32. ಅರ್ಥಾತ್- ನಿಸರ್ಗದಲ್ಲಿ ಗೋಚರಿಸುತ್ತಿರುವುದೆಲ್ಲವೂ ಅವನ ಪ್ರಕಾಶದಿಂದಲೇ ಆಗಿದೆ.

33. ಈ ಉದಾಹರಣೆಯಲ್ಲಿ ಅಲ್ಲಾಹನನ್ನು ದೀಪಕ್ಕೂ ನಿಸರ್ಗವನ್ನು ಗೋಡೆಗೂಡಿಗೂ ಹೋಲಿಸಲಾಗಿದೆ. ಗಾಜಿನ ಬುರುಡೆಯೆಂದರೆ ದೇವನು

ಪ್ರಕಾಶದೆಡೆಗೆ ಮಾರ್ಗದರ್ಶನ ನೀಡುತ್ತಾನೆ. ಅವನು ಜನರಿಗೆ ಉಪಮೆಗಳ ಮೂಲಕ ಮನವರಿಕೆ ಮಾಡಿಸುತ್ತಾನೆ. ಅಲ್ಲಾಹನು ಸಕಲ ವಸ್ತುಗಳನ್ನೂ ಬಲ್ಲವನಾಗಿರುತ್ತಾನೆ.

لِلنَّاسِ ۗ وَاللَّهُ بِكُلِّ شَيْءٍ عَلِيمٌ ﴿٣٥﴾

36-37. (ಅವನ ಪ್ರಕಾಶದ ಕಡೆಗೆ ಮಾರ್ಗದರ್ಶನ ಪಡೆಯುವವರು) ಅಲ್ಲಾಹನು ಉನ್ನತಗೊಳಿಸಲು ಹಾಗೂ ಅವುಗಳಲ್ಲಿ ತನ್ನ ನಾಮಸ್ಮರಣೆ ಮಾಡಲು ಅನುಮತಿ ನೀಡಿರುವಂತಹ ಮನೆಗಳಲ್ಲಿ ಕಂಡು ಬರುತ್ತಾರೆ. ಅವುಗಳೊಳಗೆ ಬೆಳಗು ಬೈಗುಗಳಲ್ಲಿ ಅವನ ಕೀರ್ತನೆ ಮಾಡುತ್ತಿರುವವರನ್ನು ವ್ಯಾಪಾರ ಮತ್ತು ಕ್ರಯ-ವಿಕ್ರಯಗಳು, ಅಲ್ಲಾಹನ ಸ್ಮರಣೆಯಿಂದಲೂ ನಮಾಝಿನ ಸಂಸ್ಥಾಪನೆಯಿಂದಲೂ ಝಕಾತಿನ ಪಾವತಿಯಿಂದಲೂ ಅಲಕ್ಷ್ಯರಾಗಿ ಮಾಡುವುದಿಲ್ಲ. ಹೃದಯಗಳು ಪಲ್ಲಟಗೊಳ್ಳುವ ಮತ್ತು ದೃಷ್ಟಿಗಳು ಸ್ತಬ್ಧಗೊಳ್ಳುವಂತಹ ಆ ದಿನವನ್ನು ಅವರು ಭಯ ಪಡುತ್ತಿರುವರು.

فِي بُيُوتٍ أَذِنَ اللَّهُ أَنْ تُرْفَعَ وَيُذْكَرَ فِيهَا اسْمُهُ يُسَبِّحُ لَهُ فِيهَا بِالْغُدُوِّ وَالْآصَالِ ﴿٣٦﴾

رِجَالٌ لَا تُلْهِيهِمْ تِجَارَةٌ وَلَا بَيْعٌ عَنْ ذِكْرِ اللَّهِ وَإِقَامِ الصَّلَاةِ وَإِيتَاءِ الزَّكَاةِ ۙ يَخَافُونَ يَوْمًا تَتَقَلَّبُ فِيهِ الْقُلُوبُ وَالْأَبْصَارُ ﴿٣٧﴾

38. ಅಲ್ಲಾಹನು ಅವರಿಗೆ ಅವರ ಅತ್ಯುತ್ತಮ ಕರ್ಮದ ಫಲಗಳನ್ನು ಮತ್ತು ತನ್ನ ಅನುಗ್ರಹದಿಂದ ಇನ್ನಷ್ಟನ್ನು ದಯಪಾಲಿಸುವಂತಾಗಲಿಕ್ಕಾಗಿ (ಅವರು ಇದನ್ನೆಲ್ಲಾ ಮಾಡುತ್ತಾರೆ). ಅಲ್ಲಾಹನು ತಾನಿಚ್ಛಿಸಿದವರಿಗೆ ಅಪರಿಮಿತವಾಗಿ ನೀಡುತ್ತಾನೆ.

لِيَجْزِيَهُمُ اللَّهُ أَحْسَنَ مَا عَمِلُوا وَيَزِيدَهُمْ مِنْ فَضْلِهِ ۗ وَاللَّهُ يَرْزُقُ مَنْ يَشَاءُ بِغَيْرِ حِسَابٍ ﴿٣٨﴾

39. (ಇದಕ್ಕೆ ವ್ಯತಿರಿಕ್ತವಾಗಿ) ಸತ್ಯನಿಷೇಧವನ್ನು ಕೈಗೊಂಡವರ ಕರ್ಮಗಳ ಉದಾಹರಣೆ ಹೀಗಿದೆ; ನಿರ್ಜಲ ಮರುಭೂಮಿಯಲ್ಲಿರುವ ಮರೀಚಿಕೆ. ಅದನ್ನು ಬಾಯಾರಿಕೆಯಾದವನು ನೀರೆಂದು ಭ್ರಮಿಸಿದ್ದನು. ಆದರೆ ಅಲ್ಲಿಗೆ ತಲುಪಿದಾಗ ಅಲ್ಲೇನನ್ನೂ ಕಾಣಲಿಲ್ಲ. ಬದಲಾಗಿ ಅಲ್ಲಿ ಅವನು ಅಲ್ಲಾಹನನ್ನು ಕಂಡನು. ಅವನು (ಅಲ್ಲಾಹನು) ಅವನ ಲೆಕ್ಕವನ್ನು ಸಂಪೂರ್ಣವಾಗಿ ತೀರಿಸಿಬಿಟ್ಟನು ಮತ್ತು ಅಲ್ಲಾಹನಿಗೆ ಲೆಕ್ಕ ತೀರಿಸುವುದರಲ್ಲಿ ವಿಳಂಬವಾಗುವುದಿಲ್ಲ.

وَالَّذِينَ كَفَرُوا أَعْمَالُهُمْ كَسَرَابٍ بِقِيعَةٍ يَحْسَبُهُ الظَّمْآنُ مَاءً حَتَّىٰ إِذَا جَاءَهُ لَمْ يَجِدْهُ شَيْئًا وَوَجَدَ اللَّهَ عِنْدَهُ فَوَفَّاهُ حِسَابَهُ ۗ وَاللَّهُ سَرِيعُ الْحِسَابِ ﴿٣٩﴾

ತನ್ನನ್ನು ಸೃಷ್ಟಿಗಳ ದೃಷ್ಟಿಯಿಂದ ಮರೆಮಾಚಲು ಮಾಡಿರುವ ಪರದೆ. ಆದರೆ ಈ ಪರದೆ ಮರೆಮಾಚಲು ಇರುವುದಲ್ಲ. ಬದಲಾಗಿ ಅತ್ಯಂತ ತೀವ್ರವಾಗಿ ಪ್ರಶೋಭಿ ಸುವ ಪರದೆಯಂತಿದೆ. ಸೃಷ್ಟಿಗಳ ಕಣ್ಣುಗಳು ಅದನ್ನು ನೋಡಲು ಅಸಮರ್ಥವಾಗಿವೆ. ಏಕೆಂದರೆ ಅದೆಷ್ಟು ತೀಕ್ಷ್ಣ, ವಿಸ್ತೃತ ಮತ್ತು ವ್ಯಾಪಕವಾಗಿದೆಯೆಂದರೆ ಪರಿಮಿತ ಶಕ್ತಿಯನ್ನು ಹೊಂದಿರುವ ದೃಷ್ಟಿಗಳಿಂದ ಅದನ್ನು ನೋಡಲು ಸಾಧ್ಯವಿಲ್ಲ. ಇನ್ನು "ಆ ದೀಪವನ್ನು ಪೌರ್ವಾತ್ಯವೂ ಪಾಶ್ಚಿಮಾತ್ಯವೂ ಅಲ್ಲದ ಆಲಿವ್‌ನ ಎಣ್ಣೆಯಿಂದ ಬೆಳಗಿಸಲಾಗುತ್ತದೆ" ಎಂಬ ವಿಷಯ. ಇದನ್ನು ದೀಪದ ಬೆಳಕಿನ ಪರಿಪೂರ್ಣತೆ ಮತ್ತು ತೀಕ್ಷ್ಣತೆಯ ಭಾವನೆ ಮೂಡಿಸಲಿಕ್ಕಾಗಿ ಹೇಳಲಾಗಿದೆ. ಏಕೆಂದರೆ ಪ್ರಾಚೀನ ಕಾಲದಲ್ಲಿ ಆಲಿವ್‌ನ ಎಣ್ಣೆಯಿಂದ ಹೊತ್ತಿಸಲಾಗುವ ಕಂದೀಲುಗಳಿಂದ ಗರಿಷ್ಠ ಬೆಳಕು ಸಿಗುತ್ತಿತ್ತು. ಅದರಲ್ಲೂ ಎತ್ತರವಾದ ಮತ್ತು ಬಯಲು ಪ್ರದೇಶದಲ್ಲಿ ಹುಟ್ಟಿದ ಆಲಿವ್ ಮರದಿಂದ ತೆಗೆಯ ಲಾದ ಎಣ್ಣೆಯಿಂದ ಉರಿಸುವ ದೀಪಗಳು ಅತ್ಯಂತ ಪ್ರಕಾಶಮಯವಾಗಿರುತ್ತಿದ್ದುವು. "ಬೆಂಕಿ ತಾಗಿದರೂ ಇಲ್ಲದಿದ್ದರೂ ಅದು ತಾನಾಗಿಯೇ ಉರಿದೇಳುತ್ತದೆ" ಎಂಬ ನಿರೂಪಣೆಯ ಉದ್ದೇಶವೂ ದೀಪದ ಪ್ರಕಾಶ ಅತ್ಯಂತ ತೀಕ್ಷ್ಣವಾಗಿದೆ ಎಂಬ ಭಾವನೆಯನ್ನು ಮೂಡಿಸುವುದೇ ಆಗಿದೆ.

40. ಅಥವಾ ಅವನ ಉದಾಹರಣೆ ಹೀಗಿದೆ;- ಒಂದು ಆಳವಾದ ಸಾಗರದಲ್ಲಿ ಅಂಧಕಾರ, ಮೇಲೊಂದು ತೆರೆ ಆವರಿಸಿದೆ, ಅದರ ಮೇಲೆ ಇನ್ನೊಂದು ತೆರೆ ಮತ್ತು ಅದರ ಮೇಲೆ ಮೋಡ ಆವರಿಸಿಕೊಂಡಿದೆ. ಅಂಧಕಾರದ ಮೇಲೆ ಅಂಧಕಾರ ಕವಿದಿದೆ. ಮನುಷ್ಯನು ತನ್ನ ಕೈಯನ್ನು ಹೊರ ಚಾಚಿದರೆ ಅದೂ ಅವನಿಗೆ ಕಾಣದು. ಯಾರಿಗೆ ಅಲ್ಲಾಹನು ಪ್ರಕಾಶವನ್ನು ದಯಪಾಲಿಸ ಲಿಲ್ಲವೋ ಅವನಿಗೆ ಬೇರಾವ ಪ್ರಕಾಶವೂ ಇಲ್ಲ.

أَوْ كَظُلُمَٰتٍ فِي بَحْرٍ لُّجِّيٍّ يَغْشَىٰهُ مَوْجٌ
مِّن فَوْقِهِۦ مَوْجٌ مِّن فَوْقِهِۦ سَحَابٌ ۚ
ظُلُمَٰتٌۢ بَعْضُهَا فَوْقَ بَعْضٍ ۚ إِذَآ أَخْرَجَ
يَدَهُۥ لَمْ يَكَدْ يَرَىٰهَا ۗ وَمَن لَّمْ
يَجْعَلِ ٱللَّهُ لَهُۥ نُورًا فَمَا لَهُۥ مِن نُّورٍ ﴿٤٠﴾ ع

41. ಭೂಮಿ-ಆಕಾಶಗಳಲ್ಲಿ ಇರುವವುಗಳೆಲ್ಲವೂ ರೆಕ್ಕೆ ಬಿಚ್ಚಿ ಹಾರುತ್ತಿ ರುವ ಹಕ್ಕಿಗಳೂ ಅಲ್ಲಾಹನ ಕೀರ್ತನೆ ಮಾಡುತ್ತಿರುವುದನ್ನು ನೀವು ನೋಡುತ್ತಿಲ್ಲವೇ? ಪ್ರತಿಯೊಂದಕ್ಕೂ ತನ್ನ ನಮಾಝಿನ ಮತ್ತು ಕೀರ್ತನೆಯ ಕ್ರಮ ಗೊತ್ತಿದೆ. ಇವೆಲ್ಲವೂ ಮಾಡುತ್ತಿರುವು ದನ್ನು ಅಲ್ಲಾಹನು ಅರಿತಿರುತ್ತಾನೆ.

أَلَمْ تَرَ أَنَّ ٱللَّهَ يُسَبِّحُ لَهُۥ مَن فِي
ٱلسَّمَٰوَٰتِ وَٱلْأَرْضِ وَٱلطَّيْرُ صَٰٓفَّٰتٍ ۖ
كُلٌّ قَدْ عَلِمَ صَلَاتَهُۥ وَتَسْبِيحَهُۥ ۗ
وَٱللَّهُ عَلِيمٌۢ بِمَا يَفْعَلُونَ ﴿٤١﴾

42. ಭೂಮಿ-ಆಕಾಶಗಳ ಸಾರ್ವಭೌಮತೆಯು ಅಲ್ಲಾಹನಿಗೆ ಇದೆ ಮತ್ತು ಅವನ ಕಡೆಗೆ ಎಲ್ಲರಿಗೂ ಮರಳಲಿಕ್ಕಿದೆ.

وَلِلَّهِ مُلْكُ ٱلسَّمَٰوَٰتِ وَٱلْأَرْضِ ۖ
وَإِلَى ٱللَّهِ ٱلْمَصِيرُ ﴿٤٢﴾

43. ನೀವು ನೋಡುತ್ತಿಲ್ಲವೇ? ಅಲ್ಲಾಹನು ಮೋಡವನ್ನು ಮೆಲ್ಲ ಮೆಲ್ಲನೆ ಚಲಾಯಿಸುತ್ತಾನೆ. ಅನಂತರ ಅದರ ತುಂಡುಗಳನ್ನು ಪರಸ್ಪರ ಜೋಡಿಸುತ್ತಾನೆ. ತರುವಾಯ ಅದನ್ನು ಒಟ್ಟು ಗೂಡಿಸಿ ಒಂದು ಘನೀಕೃತ ಮೋಡವನ್ನಾಗಿ ಮಾಡುತ್ತಾನೆ. ಆ ಬಳಿಕ ಅದರ ಹೊರಾವರಣದಿಂದ ಮಳೆಯ ಬಿಂದುಗಳು ಹನಿ ಹನಿಯಾಗಿ ಬೀಳುತ್ತಿರುವುದನ್ನು ನೀವು ನೋಡುತ್ತೀರಿ ಮತ್ತು ಅವನು ಆಕಾಶದಿಂದ ಅದರಲ್ಲಿ ಉನ್ನತವಾಗಿರುವ ಪರ್ವತ ಗಳಿಂದಾಗಿ[34] ಆಲಿಕಲ್ಲುಗಳನ್ನು ಬೀಳಿಸಿ ಅದರಿಂದ ತಾನಿಚ್ಛಿಸು ವವರಿಗೆ ಹಾನಿಯುಂಟು ಮಾಡುತ್ತಾನೆ ಮತ್ತು ತಾನಿಚ್ಛಿಸುವವರನ್ನು ಅವುಗಳಿಂದ ರಕ್ಷಿಸುತ್ತಾನೆ. ಅದರ ಮಿಂಚಿನ ಹೊಳಪು ಕಣ್ಣು ಗಳನ್ನು ಕೋರೈಸಿ ಬಿಡುತ್ತದೆ.

أَلَمْ تَرَ أَنَّ ٱللَّهَ يُزْجِي سَحَابًا ثُمَّ يُؤَلِّفُ
بَيْنَهُۥ ثُمَّ يَجْعَلُهُۥ رُكَامًا فَتَرَى ٱلْوَدْقَ
يَخْرُجُ مِنْ خِلَٰلِهِۦ وَيُنَزِّلُ مِنَ ٱلسَّمَآءِ
مِن جِبَالٍ فِيهَا مِنۢ بَرَدٍ فَيُصِيبُ بِهِۦ
مَن يَشَآءُ وَيَصْرِفُهُۥ عَن مَّن يَشَآءُ ۖ
يَكَادُ سَنَا بَرْقِهِۦ يَذْهَبُ بِٱلْأَبْصَٰرِ ﴿٤٣﴾

34. ಇದರ ಅರ್ಥ ಚಳಿಯಿಂದ ಹೆಪ್ಪುಗಟ್ಟಿದ ಮೋಡಗಳೂ ಆಗಬಹುದು. ಅವುಗಳನ್ನು ಆಲಂಕಾರಿಕವಾಗಿ ಆಕಾಶದ ಪರ್ವತಗಳು ಎನ್ನಲಾಗಿದೆ. ಗಗನದೆತ್ತರಕ್ಕೆ ಚಾಚಿ ನಿಂತಿರುವ ಭೂಮಿಯ ಪರ್ವತಗಳನ್ನೂ ಹೀಗೆ ಹೇಳಲಾಗಿರಬಹುದು. ಅವುಗಳ ಉನ್ನತ ಶಿಖರಗಳಲ್ಲಿ ಗಟ್ಟಿಯಾಗಿರುವ ಹಿಮದಿಂದ ಗಾಳಿ ಎಷ್ಟು ತಣ್ಣಗಾಗಿ ಬಿಡುತ್ತದೆಂದರೆ ಅದರ ಪ್ರಭಾವದಿಂದ ಮೋಡಗಳು ಹೆಪ್ಪುಗಟ್ಟುತ್ತವೆ. ಅನಂತರ ಉಣ್ಣೆಯಂತೆ ಗೋಚರಿಸುವ ಹಿಮದ ಮಳೆಯಾಗ ತೊಡಗುತ್ತದೆ.

44. ರಾತ್ರಿ ಹಗಲುಗಳ ಪರಿವರ್ತನೆಯನ್ನು ಅವನೇ ಮಾಡುತ್ತಿರುತ್ತಾನೆ. ನಿಶ್ಚಯವಾಗಿಯೂ ಇದರಲ್ಲಿ ಕಣ್ಣುಳ್ಳವರಿಗೆ ಒಂದು ಪಾಠವಿದೆ.

يُقَلِّبُ اللّٰهُ الَّيْلَ وَالنَّهَارَ ۗ اِنَّ فِيْ ذٰلِكَ
لَعِبْرَةً لِّاُولِي الْاَبْصَارِ ﴿٤٤﴾

45. ಅಲ್ಲಾಹನು ಪ್ರತಿಯೊಂದು ಜೀವಿಯನ್ನು ಒಂದು ವಿಧದ ನೀರಿನಿಂದ ಸೃಷ್ಟಿಸಿದನು. ಆ ಪೈಕಿ ಕೆಲವು ಹೊಟ್ಟೆಯನ್ನಾಧರಿಸಿ ನಡೆದರೆ, ಇನ್ನು ಕೆಲವು ಎರಡು ಕಾಲುಗಳ ಮೇಲೂ ಮತ್ತೆ ಕೆಲವು ನಾಲ್ಕು ಕಾಲುಗಳ ಮೇಲೂ ನಡೆಯುತ್ತವೆ. ಅವನು ತಾನಿಚ್ಛಿಸಿದ್ದನ್ನು ಸೃಷ್ಟಿಸುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನು.

وَاللّٰهُ خَلَقَ كُلَّ دَآبَّةٍ مِّنْ مَّآءٍ ۚ
فَمِنْهُمْ مَّنْ يَّمْشِيْ عَلٰى بَطْنِهٖ ۚ وَمِنْهُمْ
مَّنْ يَّمْشِيْ عَلٰى رِجْلَيْنِ ۚ وَمِنْهُمْ مَّنْ
يَّمْشِيْ عَلٰٓى اَرْبَعٍ ۗ يَخْلُقُ اللّٰهُ مَا يَشَآءُ ۗ
اِنَّ اللّٰهَ عَلٰى كُلِّ شَيْءٍ قَدِيْرٌ ﴿٤٥﴾

46. ನಾವು ಸುವ್ಯಕ್ತ ವಾಸ್ತವಿಕತೆಯನ್ನು ತಿಳಿಸುವಂತಹ ಸೂಕ್ತಗಳನ್ನು ಅವತೀರ್ಣಗೊಳಿಸಿದ್ದೇವೆ. ಮುಂದೆ ನೇರ ಮಾರ್ಗದ ಕಡೆಗೆ ಅಲ್ಲಾಹನೇ ತಾನಿಚ್ಛಿಸಿದವರಿಗೆ ಮಾರ್ಗದರ್ಶನ ಮಾಡುತ್ತಾನೆ.

لَقَدْ اَنْزَلْنَآ اٰيٰتٍ مُّبَيِّنٰتٍ ۗ وَاللّٰهُ يَهْدِيْ
مَنْ يَّشَآءُ اِلٰى صِرَاطٍ مُّسْتَقِيْمٍ ﴿٤٦﴾

47. ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸ ವಿರಿಸಿದೆವೆಂದೂ ನಾವು ಅನುಸರಣೆಯನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ. ಆದರೆ ಅನಂತರ ಅವರಲ್ಲೊಂದು ವಿಭಾಗವು (ಅನುಸರಣೆಯಿಂದ) ವಿಮುಖವಾಗಿ ಬಿಡುತ್ತದೆ. ಇಂತಹವರು ಖಂಡಿತ ಸತ್ಯವಿಶ್ವಾಸಿಗಳಲ್ಲ.

وَيَقُوْلُوْنَ اٰمَنَّا بِاللّٰهِ وَبِالرَّسُوْلِ وَاَطَعْنَا
ثُمَّ يَتَوَلّٰى فَرِيْقٌ مِّنْهُمْ مِّنْ بَعْدِ ذٰلِكَ ۗ
وَمَآ اُولٰٓئِكَ بِالْمُؤْمِنِيْنَ ﴿٤٧﴾

48. ಅವರ ನಡುವಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಅವರನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಗೆ ಕರೆಯಲಾದಾಗ ಅವರಲ್ಲೊಂದು ವಿಭಾಗವು ಹಿಂಜರಿಯುತ್ತದೆ.

وَاِذَا دُعُوْٓا اِلَى اللّٰهِ وَرَسُوْلِهٖ لِيَحْكُمَ
بَيْنَهُمْ اِذَا فَرِيْقٌ مِّنْهُمْ مُّعْرِضُوْنَ ﴿٤٨﴾

49. ಆದರೆ ಸತ್ಯವು ಅವರ ಪರವಾಗಿದ್ದರೆ ಅತ್ಯಂತ ವಿಧೇಯರಾಗಿ ರಸೂಲರ ಬಳಿಗೆ ಬಂದು ಬಿಡುತ್ತಾರೆ.

وَاِنْ يَّكُنْ لَّهُمُ الْحَقُّ يَاْتُوْٓا
اِلَيْهِ مُذْعِنِيْنَ ﴿٤٩﴾

50. ಇವರ ಹೃದಯಗಳಿಗೆ (ಕಪಟವಿಶ್ವಾಸದ) ರೋಗ ತಗಲಿದೆಯೇ? ಅಥವಾ ಇವರು ಸಂಶಯಗ್ರಸ್ತರಾಗಿರುವರೇ? ಅಥವಾ ಅವರಿಗೆ ಅಲ್ಲಾಹ್ ಮತ್ತು ರಸೂಲರು ಅವರ ಮೇಲೆ ಅನ್ಯಾಯ ಮಾಡುವರೆಂಬ ಭಯವಿದೆಯೇ? ವಾಸ್ತವದಲ್ಲಿ ಅಕ್ರಮಿಗಳಂತೂ ಅವರೇ ಆಗಿರುತ್ತಾರೆ.

اَفِيْ قُلُوْبِهِمْ مَّرَضٌ اَمِ ارْتَابُوْٓا اَمْ
يَخَافُوْنَ اَنْ يَّحِيْفَ اللّٰهُ عَلَيْهِمْ وَ
رَسُوْلُهٗ ۗ بَلْ اُولٰٓئِكَ هُمُ الظّٰلِمُوْنَ ﴿٥٠﴾

51. ಅವರ ಮೊಕದ್ದಮೆಯ ಬಗ್ಗೆ ತೀರ್ಪು ನೀಡುವಂತಾಗಲು ಅವರನ್ನು ಅಲ್ಲಾಹ್ ಮತ್ತು ರಸೂಲರ ಕಡೆಗೆ ಕರೆಯಲಾದಾಗ,

اِنَّمَا كَانَ قَوْلَ الْمُؤْمِنِيْنَ اِذَا دُعُوْٓا
اِلَى اللّٰهِ وَرَسُوْلِهٖ لِيَحْكُمَ بَيْنَهُمْ اَنْ

ನಾವು ಆಲಿಸಿದೆವು ಮತ್ತು ಅನುಸರಿಸಿದೆವು ಎಂದು ಹೇಳುವುದೇ ಸತ್ಯವಿಶ್ವಾಸಿಗಳ ಕರ್ತವ್ಯವಾಗಿರುತ್ತದೆ. ಇಂತಹವರೇ ಯಶಸ್ವಿಗಳಾಗುವವರು.

يَّقُولُوا سَمِعْنَا وَأَطَعْنَا ۚ وَأُولَٰئِكَ
هُمُ الْمُفْلِحُونَ ﴿٥١﴾

52. ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲನೆ ಮಾಡುವವರು ಅಲ್ಲಾಹನನ್ನು ಭಯಪಡುವವರು ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರುವವರೇ ವಿಜಯಿಗಳು.

وَمَن يُطِعِ اللَّهَ وَرَسُولَهُ وَيَخْشَ
اللَّهَ وَيَتَّقْهِ فَأُولَٰئِكَ هُمُ الْفَائِزُونَ ﴿٥٢﴾

53. ಅವರು (ಕಪಟವಿಶ್ವಾಸಿಗಳು) ಅಲ್ಲಾಹನ ಹೆಸರಲ್ಲಿ ಕಟ್ಟಾಣೆಗಳನ್ನು ಹಾಕುತ್ತಾ "ತಾವು ಅಪ್ಪಣೆ ಕೊಟ್ಟರೆ ನಾವು ಮನೆಗಳಿಂದ ಹೊರಟು ಬರುವೆವು" ಎನ್ನುತ್ತಾರೆ. ಇವರೊಡನೆ (ಹೀಗೆ) ಹೇಳಿರಿ- "ಆಣೆ ಹಾಕಬೇಡಿರಿ. ನಿಮ್ಮ ವಿಧೇಯತೆಯ ಸಂಗತಿ ಗೊತ್ತಿದೆ. ನಿಮ್ಮ ದುಷ್ಕೃತ್ಯಗಳ ಬಗ್ಗೆ ಅಲ್ಲಾಹನು ಅಜ್ಞನಾಗಿಲ್ಲ."

وَأَقْسَمُوا بِاللَّهِ جَهْدَ أَيْمَانِهِمْ لَئِنْ
أَمَرْتَهُمْ لَيَخْرُجُنَّ ۖ قُل لَّا تُقْسِمُوا ۖ طَاعَةٌ
مَّعْرُوفَةٌ ۚ إِنَّ اللَّهَ خَبِيرٌ بِمَا تَعْمَلُونَ ﴿٥٣﴾

54. ಹೇಳಿರಿ- ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲಕರಾಗಿರಿ. ಒಂದು ವೇಳೆ ನೀವು ವಿಮುಖರಾದರೆ ರಸೂಲರು, ಅವರ ಮೇಲಿರುವ ಕರ್ತವ್ಯಗಳಿಗೆ ಹೊಣೆಗಾರರು ಮತ್ತು ನಿಮ್ಮ ಮೇಲಿರುವ ಕರ್ತವ್ಯಗಳಿಗೆ ನೀವೇ ಹೊಣೆಗಾರರು ಎಂಬುದು ನಿಮಗೆ ಚೆನ್ನಾಗಿ ತಿಳಿದಿರಲಿ. ಅವರ ಅನುಸರಣೆ ಮಾಡಿದರೆ ನೀವೇ ಸನ್ಮಾರ್ಗ ಹೊಂದುವಿರಿ. ಅನ್ಯಥಾ ಸುವ್ಯಕ್ತವಾಗಿ ಆದೇಶಗಳನ್ನು ತಲಪಿಸುವುದಕ್ಕಿಂತ ಹೆಚ್ಚಿನ ಹೊಣೆಯೇನೂ ರಸೂಲರ ಮೇಲಿಲ್ಲ.

قُلْ أَطِيعُوا اللَّهَ وَأَطِيعُوا الرَّسُولَ ۖ فَإِن
تَوَلَّوْا فَإِنَّمَا عَلَيْهِ مَا حُمِّلَ وَعَلَيْكُم
مَّا حُمِّلْتُمْ ۖ وَإِن تُطِيعُوهُ تَهْتَدُوا ۚ وَمَا
عَلَى الرَّسُولِ إِلَّا الْبَلَاغُ الْمُبِينُ ﴿٥٤﴾

55. ನಿಮ್ಮ ಪೈಕಿ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ, ಅಲ್ಲಾಹನು ಅವರಿಗಿಂತ ಮುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಗಳಾಗಿ ಮಾಡಿದಂತೆಯೇ ಅವರನ್ನು ಮಾಡುವನೆಂದು ವಾಗ್ದಾನ ಮಾಡಿರುವನು. ತಾನು ಅವರಿಗಾಗಿ ಮೆಚ್ಚಿರುವ ಅವರ ಧರ್ಮವನ್ನು ಸುಭದ್ರ ಬುನಾದಿಗಳಲ್ಲಿ ಸ್ಥಾಪಿಸುವನು ಮತ್ತು ಅವರ (ಪ್ರಚಲಿತ) ಭಯಾವಸ್ಥೆಯನ್ನು ಶಾಂತಿಯಾಗಿ ಮಾರ್ಪಡಿಸಿಬಿಡುವನು. ಅವರು ನನ್ನ ದಾಸ್ಯ-ಆರಾಧನೆ ಮಾತ್ರ ಮಾಡಲಿ ಮತ್ತು ನನ್ನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡದಿರಲಿ,[35]

وَعَدَ اللَّهُ الَّذِينَ آمَنُوا مِنكُمْ وَعَمِلُوا
الصَّالِحَاتِ لَيَسْتَخْلِفَنَّهُمْ فِي الْأَرْضِ
كَمَا اسْتَخْلَفَ الَّذِينَ مِن قَبْلِهِمْ
وَلَيُمَكِّنَنَّ لَهُمْ دِينَهُمُ الَّذِي ارْتَضَىٰ
لَهُمْ وَلَيُبَدِّلَنَّهُم مِّن بَعْدِ خَوْفِهِمْ
أَمْنًا ۚ يَعْبُدُونَنِي لَا يُشْرِكُونَ بِي
شَيْئًا ۚ وَمَن كَفَرَ بَعْدَ ذَٰلِكَ

35. ಕೆಲವರು ಇದಕ್ಕೆ ಲೋಕದಲ್ಲಿ ಅಧಿಕಾರ ಪ್ರಾಪ್ತವಿರುವವರೆಲ್ಲರಿಗೂ ದೇವನು 'ಖಿಲಾಫತ್' ಪ್ರದಾನ ಮಾಡಿದ್ದಾನೆ ಎಂಬ ಅರ್ಥ ಕಲ್ಪಿಸುತ್ತಾರೆ. ವಾಸ್ತವದಲ್ಲಿ ಈ ಸೂಕ್ತದಲ್ಲಿ ಸತ್ಯವಿಶ್ವಾಸಿಯಾದವರಿಗೇ ಅಲ್ಲಾಹನು 'ಖಿಲಾಫತ್' ಪ್ರದಾನ ಮಾಡುತ್ತಾನೆ ಎಂದು ಹೇಳಲಾಗಿದೆ.

ಇದಾದ ಬಳಿಕ ಯಾರು 'ದೇವಸಹಭಾಗಿತ್ವ'[36] ಮಾಡುವರೋ ಅವರೇ ಕರ್ಮಭ್ರಷ್ಟರು.

فَاُولٰٓئِكَ هُمُ الْفٰسِقُوْنَ ﴿٥٥﴾

56. ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ಕೊಡಿರಿ ಮತ್ತು ರಸೂಲರನ್ನು ಅನುಸರಿಸಿರಿ. ನಿಮ್ಮ ಮೇಲೆ ದಯೆ ತೋರಲ್ಪಡಲೂ ಬಹುದು.

وَاَقِيْمُوا الصَّلٰوةَ وَاٰتُوا الزَّكٰوةَ
وَاَطِيْعُوا الرَّسُوْلَ لَعَلَّكُمْ تُرْحَمُوْنَ ﴿٥٦﴾

57. ಸತ್ಯನಿಷೇಧಿಗಳು ಭೂಮಿಯಲ್ಲಿ ಅಲ್ಲಾಹನನ್ನು ಪರಾಜಿತಗೊಳಿಸಿ ಬಿಡುವರೆಂಬ ತಪ್ಪುಕಲ್ಪನೆಯಲ್ಲಿರಬೇಡಿರಿ. ನರಕವೇ ಅವರ ನೆಲೆ ಮತ್ತು ಅದು ಅತ್ಯಂತ ಕೆಟ್ಟ ನೆಲೆಯಾಗಿದೆ.

لَا تَحْسَبَنَّ الَّذِيْنَ كَفَرُوْا مُعْجِزِيْنَ
فِي الْاَرْضِ ۚ وَمَاْوٰىهُمُ النَّارُ ۗ وَ
لَبِئْسَ الْمَصِيْرُ ﴿٥٧﴾

ع

58. ಸತ್ಯವಿಶ್ವಾಸಿಗಳೇ, ನಿಮ್ಮ ದಾಸ-ದಾಸಿಯರು ಮತ್ತು ಇನ್ನೂ ಪ್ರಬುದ್ಧರಾಗದ ನಿಮ್ಮ ಮಕ್ಕಳು ಮೂರು ಹೊತ್ತುಗಳಲ್ಲಿ ನಿಮ್ಮ ಬಳಿಗೆ ಬರುವಾಗ ಅನುಮತಿ ಪಡೆದು ಬರಬೇಕಾದುದು ಅಗತ್ಯ. ಫಜ್ರ್(ಮುಂಜಾವಿನ) ನಮಾಝಿಗಿಂತ ಮುಂಚೆ, ಮಧ್ಯಾಹ್ನ ನೀವು ಉಡುಪುಗಳನ್ನು ಕಳಚಿಡುವಾಗ ಮತ್ತು ಇಷಾ(ರಾತ್ರಿಯ) ನಮಾಝಿನ ಅನಂತರ. ಇವು ಮೂರು ನಿಮಗೆ ಮರೆಯ ಸಮಯವಾಗಿದೆ. ಇವುಗಳ ನಂತರ ಅವರು ಅನುಮತಿ ಪಡೆಯದೆ ಬಂದರೆ ನಿಮ್ಮ ಮೇಲಾಗಲಿ ಅವರ ಮೇಲಾಗಲಿ ಏನೂ ದೋಷವಿಲ್ಲ. ನೀವು ಪರಸ್ಪರರ ಬಳಿಗೆ ಆಗಾಗ ಬರಲೇ ಬೇಕಾಗುತ್ತದೆ. ಈ ರೀತಿ ಅಲ್ಲಾಹನು ತನ್ನ ಆದೇಶಗಳನ್ನು ನಿಮಗಾಗಿ ವಿವರಿಸುತ್ತಾನೆ. ಅವನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

يٰٓاَيُّهَا الَّذِيْنَ اٰمَنُوْا لِيَسْتَاْذِنْكُمُ
الَّذِيْنَ مَلَكَتْ اَيْمَانُكُمْ وَالَّذِيْنَ لَمْ
يَبْلُغُوا الْحُلُمَ مِنْكُمْ ثَلٰثَ مَرّٰتٍ ۗ مِنْ
قَبْلِ صَلٰوةِ الْفَجْرِ وَحِيْنَ تَضَعُوْنَ
ثِيَابَكُمْ مِّنَ الظَّهِيْرَةِ وَمِنْۢ بَعْدِ صَلٰوةِ
الْعِشَآءِ ۗ ثَلٰثُ عَوْرٰتٍ لَّكُمْ ۗ لَيْسَ
عَلَيْكُمْ وَلَا عَلَيْهِمْ جُنَاحٌۢ بَعْدَهُنَّ ۗ
طَوّٰفُوْنَ عَلَيْكُمْ بَعْضُكُمْ عَلٰى بَعْضٍ ۗ
كَذٰلِكَ يُبَيِّنُ اللّٰهُ لَكُمُ الْاٰيٰتِ ۗ
وَاللّٰهُ عَلِيْمٌ حَكِيْمٌ ﴿٥٨﴾

59. ನಿಮ್ಮ ಮಕ್ಕಳು ಪ್ರಬುದ್ಧರಾದಾಗ ಅವರ ಹಿರಿಯರು ಅನುಮತಿ ಪಡೆಯುವಂತೆಯೇ ಅವರೂ ಅನುಮತಿ ಪಡೆದು ಬರಬೇಕು. ಈ ರೀತಿಯಲ್ಲಿ ಅಲ್ಲಾಹನು ತನ್ನ ಸೂಕ್ತಗಳನ್ನು ನಿಮ್ಮ ಮುಂದೆ ಬಿಡಿಸಿ ಹೇಳುತ್ತಾನೆ ಮತ್ತು ಅಲ್ಲಾಹ್ ಸರ್ವಜ್ಞನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

وَاِذَا بَلَغَ الْاَطْفَالُ مِنْكُمُ الْحُلُمَ
فَلْيَسْتَاْذِنُوْا كَمَا اسْتَاْذَنَ الَّذِيْنَ مِنْ
قَبْلِهِمْ ۗ كَذٰلِكَ يُبَيِّنُ اللّٰهُ لَكُمْ اٰيٰتِهٖ ۗ
وَاللّٰهُ عَلِيْمٌ حَكِيْمٌ ﴿٥٩﴾

60. ಯೌವನಾವಸ್ಥೆಯನ್ನು ದಾಟಿರುವ ವಿವಾಹಾಪೇಕ್ಷೆಇಲ್ಲದ ಸ್ತ್ರೀಯರ ತಮ್ಮ ಅಲಂಕಾರ ಪ್ರದರ್ಶನ ಮಾಡುವವರಲ್ಲವಾಗಿದ್ದರೆ

وَالْقَوَاعِدُ مِنَ النِّسَآءِ الّٰتِيْ لَا يَرْجُوْنَ
نِكَاحًا فَلَيْسَ عَلَيْهِنَّ جُنَاحٌ اَنْ يَّضَعْنَ

36. ಇದರ ಅರ್ಥ ಖಿಲಾಫತ್ ದೊರೆತ ನಂತರ ಕೃತಘ್ನತೆ ತೋರುವುದು ಎಂದೂ ಆಗಬಹುದು, ಹಾಗೆಯೇ ಮೇಲ್ನೋಟಕ್ಕೆ ಸತ್ಯವಿಶ್ವಾಸಿಯಂತಿದ್ದು ನಿಜವಾಗಿ ವಿಶ್ವಾಸಶೂನ್ಯವಾದ ಕಪಟವಿಶ್ವಾಸಿಗಳ ಧೋರಣೆಯನ್ನು ಅನುಸರಿಸುವುದು ಎಂದೂ ಆಗಬಹುದು.

ثِيَابَهُنَّ غَيْرَ مُتَبَرِّجٰتٍۭ بِزِيْنَةٍ ؕ وَ اَنْ
يَّسْتَعْفِفْنَ خَيْرٌ لَّهُنَّ ؕ وَ اللّٰهُ سَمِيْعٌ عَلِيْمٌ ﴿۶۰﴾

ಅವರು ತಮ್ಮ ಚಾದರಗಳನ್ನು ತೆಗೆದಿರಿಸಿದರೆ ಅವರ ಮೇಲೇನೂ ದೋಷವಿಲ್ಲ. ಆದರೂ ಅವರು ಲಜ್ಜಾವಂತ ನೀತಿಯನ್ನೇ ಇಟ್ಟುಕೊಂಡರೆ ಅದು ಅವರ ಮಟ್ಟಿಗೆ ಉತ್ತಮ ವಾಗಿದೆ. ಅಲ್ಲಾಹನು ಎಲ್ಲವನ್ನೂ ಆಲಿಸುತ್ತಾನೆ ಮತ್ತು ಅರಿಯುತ್ತಾನೆ.

لَيْسَ عَلَى الْاَعْمٰى حَرَجٌ وَّ لَا عَلَى الْاَعْرَجِ
حَرَجٌ وَّ لَا عَلَى الْمَرِيْضِ حَرَجٌ وَّ لَا عَلٰۤى
اَنْفُسِكُمْ اَنْ تَاْكُلُوْا مِنْۢ بُيُوْتِكُمْ اَوْ
بُيُوْتِ اٰبَآئِكُمْ اَوْ بُيُوْتِ اُمَّهٰتِكُمْ اَوْ
بُيُوْتِ اِخْوَانِكُمْ اَوْ بُيُوْتِ اَخَوٰتِكُمْ اَوْ
بُيُوْتِ اَعْمَامِكُمْ اَوْ بُيُوْتِ عَمّٰتِكُمْ اَوْ
بُيُوْتِ اَخْوَالِكُمْ اَوْ بُيُوْتِ خٰلٰتِكُمْ اَوْ
مَا مَلَكْتُمْ مَّفَاتِحَهٗۤ اَوْ صَدِيْقِكُمْ ؕ
لَيْسَ عَلَيْكُمْ جُنَاحٌ اَنْ تَاْكُلُوْا جَمِيْعًا
اَوْ اَشْتَاتًا ؕ فَاِذَا دَخَلْتُمْ بُيُوْتًا فَسَلِّمُوْا
عَلٰۤى اَنْفُسِكُمْ تَحِيَّةً مِّنْ عِنْدِ اللّٰهِ
مُبٰرَكَةً طَيِّبَةً ؕ كَذٰلِكَ يُبَيِّنُ اللّٰهُ لَكُمُ
الْاٰيٰتِ لَعَلَّكُمْ تَعْقِلُوْنَ ﴿۶۱﴾

61. ಒಬ್ಬ ಕುರುಡ, ಕುಂಟ ಅಥವಾ ರೋಗಿಯು (ಇತರರ ಮನೆಯಲ್ಲಿ ಉಂಡರೆ) ದೋಷವಿಲ್ಲ. ನೀವು ನಿಮ್ಮ ಮನೆಗಳಲ್ಲಿ, ನಿಮ್ಮ ತಂದೆ-ತಾತಂದಿರ ಮನೆಗಳಲ್ಲಿ, ನಿಮ್ಮ ತಾಯಂದಿರ ಮನೆಗಳಲ್ಲಿ ಅಥವಾ ನಿಮ್ಮ ಸಹೋದರರ ಮನೆಗಳಲ್ಲಿ ಅಥವಾ ನಿಮ್ಮ ಸಹೋದರಿಯರ ಮನೆಗಳಲ್ಲಿ ಅಥವಾ ನಿಮ್ಮ ಪಿತೃ ಸಹೋದರರ ಮನೆಗಳಲ್ಲಿ ಅಥವಾ ನಿಮ್ಮ ಸೋದರತ್ತೆಯಂದಿರ ಮನೆಗಳಲ್ಲಿ ಅಥವಾ ನಿಮ್ಮ ಸೋದರ ಮಾವಂದಿರ ಮನೆಗಳಲ್ಲಿ ಅಥವಾ ನಿಮ್ಮ ಮಾತೃ ಸೋದರಿಯರ ಮನೆಗಳಲ್ಲಿ ಅಥವಾ ಬೀಗದ ಕೈಗಳು ನಿಮ್ಮ ವಶದಲ್ಲಿರುವ ಮನೆಗಳಲ್ಲಿ ಅಥವಾ ನಿಮ್ಮ ಮಿತ್ರರ ಮನೆಗಳಲ್ಲಿ ಉಣ್ಣುವುದರಲ್ಲಿ ಅಡ್ಡಿಯಿಲ್ಲ. ನೀವು ಒಟ್ಟಾಗಿ ಉಣ್ಣುವುದರಲ್ಲೂ ಬೇರೆ ಬೇರೆಯಾಗಿ ಉಣ್ಣುವುದರಲ್ಲೂ ಆಕ್ಷೇಪವಿಲ್ಲ. ಆದರೆ ಮನೆಗಳೊಳಗೆ ಪ್ರವೇಶಿಸುವಾಗ ನಿಮ್ಮ ಜನರಿಗೆ ಸಲಾಮ್ ಹೇಳಿರಿ. ಇದು ಶುಭ ಕಾಮನೆಯಾಗಿದೆ, ಅಲ್ಲಾಹನ ವತಿಯಿಂದ ನಿಶ್ಚಯಿಸಲ್ಪಟ್ಟಿದೆ, ಅತ್ಯಂತ ಸಮೃದ್ಧ ಹಾಗೂ ಪರಿಶುದ್ಧವಾಗಿದೆ. ಹೀಗೆ ಅಲ್ಲಾಹ್ ನಿಮ್ಮ ಮುಂದೆ ಸೂಕ್ತಗಳನ್ನು ವಿವರಿಸುತ್ತಾನೆ. ನೀವು ವಿವೇಕವನ್ನು ಉಪಯೋಗಿಸುವಿರೆಂದು ನಿರೀಕ್ಷಿಸಲಾಗಿದೆ.

اِنَّمَا الْمُؤْمِنُوْنَ الَّذِيْنَ اٰمَنُوْا بِاللّٰهِ
وَ رَسُوْلِهٖ وَ اِذَا كَانُوْا مَعَهٗ عَلٰۤى اَمْرٍ
جَامِعٍ لَّمْ يَذْهَبُوْا حَتّٰى يَسْتَاْذِنُوْهُ ؕ اِنَّ
الَّذِيْنَ يَسْتَاْذِنُوْنَكَ اُولٰٓئِكَ الَّذِيْنَ
يُؤْمِنُوْنَ بِاللّٰهِ وَ رَسُوْلِهٖ ۚ فَاِذَا اسْتَاْذَنُوْكَ
لِبَعْضِ شَاْنِهِمْ فَاْذَنْ لِّمَنْ شِئْتَ مِنْهُمْ
وَ اسْتَغْفِرْ لَهُمُ اللّٰهَ ؕ اِنَّ اللّٰهَ غَفُوْرٌ رَّحِيْمٌ ﴿۶۲﴾

62. ಅಲ್ಲಾಹ್ ಮತ್ತು ಅವನ ರಸೂಲರನ್ನು ಹೃತ್ಪೂರ್ವಕ ನಂಬುವವರೇ ಸತ್ಯವಿಶ್ವಾಸಿಗಳು. ಯಾವುದಾದರೊಂದು ಸಾಮೂಹಿಕ ಕಾರ್ಯದ ಸಂದರ್ಭದಲ್ಲಿ ಅವರು ರಸೂಲರ ಜೊತೆಗಿದ್ದರೆ ಅವರಿಂದ ಅನುಮತಿ ಪಡೆಯದೆ ಹೋಗಬಾರದು. ಪೈಗಂಬರರೇ, ನಿಮ್ಮೊಡನೆ ಅನುಮತಿ ಕೇಳುವವರೇ ಅಲ್ಲಾಹ್ ಮತ್ತು ರಸೂಲರನ್ನು ನಂಬುವವರು. ಆದುದರಿಂದ ಅವರು ತಮ್ಮ ಯಾವುದಾದರೂ ಕಾರ್ಯಕ್ಕಾಗಿ ಅನುಮತಿ ಕೇಳಿದರೆ ನೀವಿಚ್ಛಿಸುವವರಿಗೆ ಅನುಮತಿ ಕೊಟ್ಟು ಬಿಡಿರಿ ಮತ್ತು ಇಂತಹವರ ಪಾಪ ವಿಮೋಚನೆಗಾಗಿ ಅಲ್ಲಾಹನೊಡನೆ ಪ್ರಾರ್ಥಿಸಿರಿ. ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

لَا تَجْعَلُوْا دُعَآءَ الرَّسُوْلِ بَيْنَكُمْ كَدُعَآءِ
بَعْضِكُمْ بَعْضًا ۗ قَدْ يَعْلَمُ اللّٰهُ الَّذِيْنَ
يَتَسَلَّلُوْنَ مِنْكُمْ لِوَاذًا ۚ فَلْيَحْذَرِ الَّذِيْنَ
يُخَالِفُوْنَ عَنْ اَمْرِهٖٓ اَنْ تُصِيْبَهُمْ فِتْنَةٌ
اَوْ يُصِيْبَهُمْ عَذَابٌ اَلِيْمٌ ﴿٦٣﴾

63. ಮುಸ್ಲಿಮರೇ, ನಿಮ್ಮ ನಡುವೆ ರಸೂಲರ ಕರೆಯನ್ನು ನೀವು ಪರಸ್ಪರ ಒಬ್ಬರನ್ನೊಬ್ಬರು ಕರೆಯುವಂತೆ ಭಾವಿಸಬೇಡಿರಿ. ನಿಮ್ಮ ಪೈಕಿ ಪರಸ್ಪರರನ್ನು ಅಡ್ಡವಾಗಿಟ್ಟು ಮೆಲ್ಲನೆ ಜಾರಿ ಕೊಳ್ಳುವ ಮಂದಿಯನ್ನು ಅಲ್ಲಾಹನು ಚೆನ್ನಾಗಿ ಅರಿತಿರುತ್ತಾನೆ. ರಸೂಲರ ಆಜ್ಞೆಗೆ ವಿರುದ್ಧ ವರ್ತಿಸುವವರು ತಾವು ಯಾವುದಾದರೂ ಆಪತ್ತಿನಲ್ಲಿ ಸಿಲುಕಿ ಬಿಡಬಹುದು ಅಥವಾ ತಮ್ಮ ಮೇಲೆ ವೇದನಾಯುಕ್ತ ಯಾತನೆ ಎರಗಬಹುದೆಂದು ಭಯಪಡಬೇಕು.

اَلَآ اِنَّ لِلّٰهِ مَا فِي السَّمٰوٰتِ وَالْاَرْضِ ۗ
قَدْ يَعْلَمُ مَآ اَنْتُمْ عَلَيْهِ ۗ وَيَوْمَ
يُرْجَعُوْنَ اِلَيْهِ فَيُنَبِّئُهُمْ بِمَا عَمِلُوْا ۗ
وَاللّٰهُ بِكُلِّ شَيْءٍ عَلِيْمٌ ﴿٦٤﴾

64. ತಿಳಿಯಿರಿ, ಭೂಮಿ-ಆಕಾಶಗಳಲ್ಲಿರುವುದೆಲ್ಲವೂ ಅಲ್ಲಾಹನದು. ನೀವು ಯಾವ ಅವಸ್ಥೆಯಲ್ಲಿದ್ದರೂ ಅದನ್ನು ಅಲ್ಲಾಹನು ಅರಿಯುತ್ತಾನೆ. ಜನರು ಆತನ ಕಡೆಗೆ ಮರಳಿಸಲ್ಪಡುವ ದಿನ ಅವರು ಏನೆಲ್ಲಾ ಮಾಡಿ ಬಂದಿರುವರೆಂಬುದನ್ನು ಅವನು ಅವರಿಗೆ ತೋರಿಸಿ ಕೊಡುವನು. ಅವನು ಸಕಲ ವಿಷಯಗಳ ಜ್ಞಾನವುಳ್ಳವನು.